ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಲ್ಯಾಣ ಕಿರಣ

ಮಾರ್ಚ್ 2016

ಶರಣರ ನಡೆ ಮುಕ್ತಿಯ ಕಡೆ









ಕಲ್ಯಾಣ ಕಿರಣ
ತಿಂಗಳ ನೋಟ

ಶರಣು ಶರಣಾರ್ಥಿ

ಒಡೆಯರು ಬಂದಡೆ ಗುಡಿ ತೋರಣವ ಕಟ್ಟಿ,
ನಂಟರು ಬಂದಡೆ ಸಮಯವಿಲ್ಲೆನ್ನಿ.
ಅಂದೇಕೆ ಬಾರರು, ನೀರಿಂಗೆ ನೇಣಿಂಗೆ
ಹೊರಗಾದಂದು, ಸಮಯಾಚಾರಕ್ಕೆ
ಒಳಗಾದಂದು. ಪರುಷ ಮುಟ್ಟಲು ಕಬ್ಬುನ
ಸುವರ್ಣವಾಯಿತ್ತು. ಬಳಿಕ ಬಂಧುಗಳುಂಟೆ,
ಲಿಂಗದೇವಾ

– ಬಸವಣ್ಣನವರು.

ಮಾರ್ಚ್

ಹಬ್ಬ, ಹುಣ್ಣಿಮೆಗಳು

ಮಾ-7: ಮಹಾಶಿವರಾತ್ರಿ

ಮಾ-13: ಪೂಜ್ಯಶ್ರೀ ಮಾತೆ ಮಹಾದೇವಿ ಅವರ 71ನೇ ವರ್ಧಂತಿ

ಸಂಪಾದಕೀಯ
ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿ,
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ,
ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ,
ಅಕ್ಷರ ಜೋಡಣೆ
ಬಸವ ಚಂದ್ರಿಕಾ
ಪುಟ ವಿನ್ಯಾಸ
ಪುನೀತ್.ಎಂ.ಜಿ.
ಪ್ರಸಾರ ಮೇಲ್ವಿಚಾರಣೆ
ಆರ್.ಎಸ್.ಹೊನ್ನಪ್ಪನವರ್

ಪ್ರತಿಗೆ : 20.00 ರೂಪಾಯಿ
ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ – 48 ಬಸವ ಶಕೆ 882
ಸಂಚಿಕೆ – 03 ಮಾರ್ಚ್ 2016



ಸಂಪಾದಕರ ನುಡಿ	2
ಅಕ್ಕನ ಅಮರವಾಣಿ ಭಾಗ-27	5
ಹಮ್ಮಿನ ದುರ್ಗದ ಅಮ್ಮಾಜಿ...	8
ಸಮಗ್ರ ಮಾಹಿತಿ	9
ಮಹಾನ್ ಶರಣ	10
ಇಷ್ಟಲಿಂಗೋಪಾಸನೆ ವೈಜ್ಞಾನಿಕ ಅರಿವು	11
ಚಿಂತನ-ಮಂಥನ	14
ವಚನವಾಣಿ	18
ಆಚಾರ ಅರಿವು ಅನುಭಾವ	22
ಮಹಾಣಿಗಳ ಪ್ರಪಂಚ	28
ಆರೋಗ್ಯ ಕಿರಣ	29

Kalyana Kirana-R.No.19988/70. Monthly Magzine Edited and published by Pujya kasthuridevi on behalf of Vishva Kalyana Mission chratible trust, Basava Mantapa, 2035, 20th main, 2nd block, Rajajinagar Bangalore -560010.

Ph: 080-23131476. SMS-9945806297.
E-mail: kalyanakirana1970@gmail.com

ಸಂಪಾದಕರ ನುಡಿ

✍ ಮಾತಾಜಿ



ಧರ್ಮಸ್ಥಳದ ಶಾಂತಿವನದಲ್ಲಿ ಕೆಲವೊಂದು ದಿನ-2

ದೊಡ್ಡ ವೈದ್ಯಾಧಿಕಾರಿಗಳಿಂದ ಹಿಡಿದು ಉಳಿದ ವೈದ್ಯರು, ಸಿಬ್ಬಂದಿ ಎಲ್ಲರಲ್ಲೂ ವೃತ್ತಿ ನಿಷ್ಠೆ, ಸೌಜನ್ಯ ತುಂಬಿ ತುಳುಕುತ್ತವೆ. ಅವರ ಕನ್ನಡ ಅತ್ಯಂತ ಮೃದು ಮತ್ತು ಆಕರ್ಷಣೀಯ. ದಿನದಲ್ಲಿ ಎರಡು ಸಲ ಯೋಗಪಾಠ, ನಂತರ ಸ್ವಚ್ಛ ಪರಿಸರದಲ್ಲಿ ವಾಯುವಿಹಾರ ಹಸಿರು ಉದ್ಯಾನ, ವಿವಿಧ ಆಕಾರಗಳಲ್ಲಿ ಕತ್ತರಿಸಿದ ಗಿಡಗಳು, ಹೆಮ್ಮರಗಳನ್ನು ತಬ್ಬಿಕೊಂಡು ಮೇಲೇರಿದ ಬಳ್ಳಿಗಳು, ಸ್ವಚ್ಛವಾದ ಡಾಂಬರ್ ರಸ್ತೆಗಳು ಹೀಗೆ ಶಾಂತಿವನ ಪ್ರಶಾಂತತೆಯ ಆಗರ.

ನಾವು ಹೋಗಿ ಎರಡನೆಯ ದಿನಕ್ಕೆ ವೈದ್ಯಾಧಿಕಾರಿಗಳು ಬಂದು ಹೇಳಿದರು. "ಇಂದು ದೊಡ್ಡವರು ಭೇಟಿಗೆ ಬರುತ್ತಿದ್ದಾರೆ." ದೊಡ್ಡವರು ಎಂದರೆ ಶ್ರೀ ಡಾ|| ವೀರೇಂದ್ರ ಹೆಗ್ಗಡೆಯವರು. ನಮಗೂ ಬಹಳ ಸಂತೋಷವೆನಿಸಿತು. ಬಹಳ ವರ್ಷಗಳ ಹಿಂದೆ ಉಡುಪಿಯ ವಿಶ್ವಹಿಂದೂ ಪರಿಷತ್ತಿನ ಸಮಾವೇಶದಲ್ಲಿ ನಾವು ಪರಸ್ಪರ ಭೇಟಿಯಾದುದು. ಆಗ ಅವರದೂ ಸಣ್ಣವಯಸ್ಸು, ನನ್ನದೂ ಸಣ್ಣವಯಸ್ಸು. ದೀರ್ಘಕಾಲದ ನಂತರ ಭೇಟಿಯಾಗುತ್ತಿರುವುದಾಗಿ ಸಂತೋಷ ವ್ಯಕ್ತಪಡಿಸಿ ಮುತ್ತಿನ ಮಣಿ ಮಾಲೆಯನ್ನು, ಹಣ್ಣಿನ ಬುಟ್ಟಿಯನ್ನು ನೀಡಿದರು. ಅತ್ಯಂತ ಸರಳವಾದ ನಡೆ-ನುಡಿ, ಮನಸ್ಸಿನ ನಿರ್ಮಲತೆಯನ್ನು ಹೊರಗೆ ಪ್ರಕಟಿಸುವಂತೆ ಬಿಳಿಯ ವಸ್ತ್ರ ಧರಿಸುವರು. ಇಂದು ಅವರಿಗೆ ಬಂದಿರುವ ಕೀರ್ತಿ, ಸಂಪತ್ತು, ಪ್ರಶಸ್ತಿಗಳ ಮಹಾಪೂರ ಇವುಗಳ ಮಧ್ಯೆ ಅವರು ಪ್ರದರ್ಶಿಸುವ ಸರಳತೆ "ತುಂಬಿದ ಕೊಡ ತುಳುಕುವುದಿಲ್ಲ" ಎಂಬ ಉಕ್ತಿಗೆ ನಿದರ್ಶನ. "ಬಸವ ಕಲ್ಯಾಣದಲ್ಲಿ 108 ಅಡಿ ಮೂರ್ತಿಯ ಅನಾವರಣಕ್ಕೆ ತಾವು ಆಹ್ವಾನ ನೀಡಿದ್ದಿರಿ. ಅದು ನವರಾತ್ರಿ ಸಮಯ. ಆಗ ನಮ್ಮಲ್ಲಿ ವಿಶೇಷ ಪೂಜೆಗಳಿರುತ್ತವೆ. ನಾವು ಕ್ಷೇತ್ರವನ್ನು ಬಿಟ್ಟು ಹೋಗಲು ಬರುವುದಿಲ್ಲ." ಎಂದು ನೆನಪು ಮಾಡಿಕೊಂಡರು.

"ಇಲ್ಲಿ ನಿಮಗೆ ಎಲ್ಲ ಅನುಕೂಲವಾಗಿದೆಯೆ? ನೀವು ಬಂದುದು ನಮಗೆ ಅತೀವ ಹರ್ಷವನ್ನು ಉಂಟು ಮಾಡಿದೆ. ಸಂಕೋಚವಿಲ್ಲದೆ ನಿಮಗೆ ಏನು ಬೇಕೋ ಕೇಳಿ ಪಡೆದುಕೊಳ್ಳಿರಿ."



ಇನ್ನು ಮೇಲೆ ವರ್ಷಕ್ಕೆ ಒಂದು ಸಲವಾದರೂ ಹತ್ತು ದಿವಸಗಳ ಅವಧಿಗಾದರೂ ಬಂದು ಹೋಗಿರಿ ಎಂದು ನುಡಿದರು. ಧರ್ಮಸ್ಥಳದ ಪರಿಚಯ ಮಾಡಿಕೊಡುವ ಒಂದು ಸುಂದರ ಪುಸ್ತಕವನ್ನು ಕೊಟ್ಟರು. "ಶ್ರೀ ವೀರೇಂದ್ರ ಹೆಗ್ಗಡೆ ಎಂದು ವಚನವೊಂದನ್ನು ಬರೆದು ತರಂಗಿಣಿ ಪುಸ್ತಕವನ್ನು ನಾನು ಅವರಿಗೆ ಅರ್ಪಿಸಿದೆ.

ಮರುದಿನ ಸಂಜೆಗೆ ಶ್ರೀ ವೀರೇಂದ್ರ ಹೆಗ್ಗಡೆಯವರ ತಮ್ಮ ಶ್ರೀ ಹರ್ಷೇಂದ್ರ ಕುಮಾರ್ ಅವರ ಪತ್ನಿ ಶ್ರೀಮತಿ ಸುಪ್ರಿಯಾ ಅವರೊಡನೆ ಬಂದರು. ಉಭಯತರೂ ನಮಸ್ಕರಿಸಿ ಕುಳಿತರು. ನೋಡಿದು ಮೊದಲನೆಯ ಸಲವಾದರೂ ಎಷ್ಟೋ ವರ್ಷಗಳ ಪರಿಚಯ ಇರುವವರಂತೆ ಸಲುಗೆಯಿಂದ ಮಾತನಾಡಿದರು. ಹಾಸ್ಯ ಪ್ರವೃತ್ತಿಯ ಶ್ರೀ ಹರ್ಷೇಂದ್ರ ಕುಮಾರ್ "ನಾನು ಬಿ.ಎ., ನನ್ನ ಹೆಂಡತಿ ಎಂ.ಎ ಹಾಗಂತ ಹೊಟ್ಟೆಕಿಚ್ಚು ಪಡುವುದಿಲ್ಲ. ಹೆಮ್ಮೆ ಪಡುತ್ತೇನೆ. ಕ್ಷೇತ್ರದ ಜವಾಬ್ದಾರಿ ಬಲು ಬೇಗನೆ ನನ್ನಣ್ಣನ ಮೇಲೆ ಬಿದ್ದಿತು. ಓದು ಮುಂದುವರಿಸಲಾಗಲಿಲ್ಲ. ಇದು ನಿಮ್ಮದೇ ಆಶ್ರಮ ಎಂದು ತಿಳಿದುಕೊಳ್ಳಿರಿ. ನಿಮಗೆ ಏನು ಬೇಕೋ ಅದನ್ನು ವಿನಂತಿ ಮಾಡದೆ ಆರ್ಡ್ದರ್ ಮಾಡಿ, ಪಡೆಯಿರಿ. ನಮ್ಮದೆಲ್ಲ ಅವಿಭಕ್ತ ಕುಟುಂಬ. ಬೆಳಗಿನ ಉಪಾಹಾರಕ್ಕೆ ಎಲ್ಲರೂ ಸೇರುತ್ತೇವೆ. ಆಗ ಅಣ್ಣನವರು ನೀವು ಬಂದಿರುವ ವಿಷಯ ಅಭಿಮಾನದಿಂದ ತಿಳಿಸಿ ಸಂತೋಷಪಟ್ಟರು. ರಾತ್ರಿ ಚೆನ್ನಾಗಿ ನಿದ್ರೆ ಬರುವುದೇ?" ಎಂದರು. "ಡಯಾಬಿಟೀಸ್‌ನಿಂದ ಅಂಗಾಲು ಉರಿ. ಹೀಗಾಗಿ ನಿದ್ರೆ ಸರಿಯಾಗಿ ಬರುವುದಿಲ್ಲ." ಎಂದು ನಾನು ಕೇಳಿದಾಗ ಸುಪ್ರಿಯಾ ಅವರು, "ಅಂಗಾಲಿಗೆ ಮಲಗುವಾಗ ಎಳ್ಳೆಣ್ಣೆ ಹಚ್ಚಿ ಮಸಾಜು ಮಾಡಿದರೆ ಉರಿ ಕಡಿಮೆಯಾಗುವುದು" ಎಂದರು. ಅದೇ ರೀತಿ ಈಗ ರಾತ್ರಿ ಮಲಗುವ ಮುನ್ನ ಎಳ್ಳೆಣ್ಣೆ ಹಚ್ಚಿ ತಿಕ್ಕಿ ಮಲಗುವುದರಿಂದ ಅಂಗಾಲು ಉರಿ ಬರುವುದಿಲ್ಲ. ಸುಪ್ರಿಯಾ ಅವರ ಹೆಸರಲ್ಲಿ ಒಂದು ವಚನ ಬರೆದು ಹೆಪ್ಪಿಟ್ಟ ಹಾಲು ಪುಸ್ತಕವನ್ನು ಕೊಟ್ಟೆನು ದಂಪತಿಗಳು ಬೀಳ್ಕೊಂಡು ಹೋದರು. ಬಹಳ ವರ್ಷಗಳ ನಂತರ ಭೇಟಿಯಾದ ಆತ್ಮೀಯ ಬಂಧುಗಳಂತೆ ಅವರು ಭಾಸವಾದರು.

ದಿನಗಳು ಸರಿದುದೇ ತಿಳಿಯಲಿಲ್ಲ; ಬೆಂಗಳೂರಿಗೆ ಬಂದು ಗುಲಬರ್ಗಾಕ್ಕೆ ಹೋಗಬೇಕಿತ್ತು. ಹೋಗುವ ತಯಾರಿಯಲ್ಲಿರುವಾಗಲೇ ಎರಡನೇ ಬಾರಿಗೆ ಶ್ರೀ ಹರ್ಷೇಂದ್ರ ಕುಮಾರ್ ಮತ್ತು ಶ್ರೀಮತಿ ಸುಪ್ರಿಯಾ ಬಂದು ಭೇಟಿಯಾದರು. ಶ್ರೀಮತಿ ಸುಪ್ರಿಯಾ ಎಂ.ಎತತ್ವಜ್ಞಾನವನ್ನು ಓದಿದ್ದಾರೆ. ಅವರು ವೀರಶೈವ ಮತ್ತು ಲಿಂಗಾಯತ ಎರಡರ ನಡುವಿನ ವ್ಯತ್ಯಾಸವೇನು ಎಂದು ಕೇಳಿದರು. ವೀರಶೈವವು ಬಸವ ಪೂರ್ವದ ಒಂದು ಶೈವಪಂಥ, ಇದಕ್ಕೆ ಆಗಮಗಳೇ ಆಧಾರ. ಲಿಂಗಾಯತವು ಗುರುಬಸವಣ್ಣನವರಿಂದ ಸ್ಥಾಪನೆಗೊಂಡ ಸ್ವತಂತ್ರ ಧರ್ಮ, ಇದಕ್ಕೆ ವಚನ ಸಾಹಿತ್ಯವೇ ಆಧಾರ. ಬೌದ್ಧ, ಜೈನ್, ಸಿಖ್ ಧರ್ಮಗಳಂತೆ ಇದು ಸ್ವತಂತ್ರ ಧರ್ಮ. ಸ್ವತಂತ್ರ ಧರ್ಮದ ಮಾನ್ಯತೆ ಇದಕ್ಕೆ ಸಿಗಬೇಕು ಎಂದು ನಾವು ಹೋರಾಡುತ್ತಿದ್ದೇವೆ."ಎಂದು ಹೇಳಿದೆ.

"ನೀವು ಯಾವಾಗಲೂ ಲಿಂಗಧರಿಸುತ್ತೀರಾ?"ಎಂದು ಕೇಳಿದರು. "ಅಹುದು ಯಾವಾಗಲೂ ಧರಿಸುತ್ತೇವೆ.

ದಿನನಿತ್ಯ ಬೆಳಿಗ್ಗೆ-ಸಂಜೆ ಎರಡು ಬಾರಿ ಪೂಜಿಸುತ್ತೇವೆ."ಎಂದು ಹೇಳಿದೆ.

"ಮಂಜುನಾಥನಿಗೂ ನೀವು ಧರಿಸುವ ಇಷ್ಟಲಿಂಗಕ್ಕೂ ಇರುವ ವ್ಯತ್ಯಾಸವನೇನು?" ಸುಪ್ರಿಯಾ ಪ್ರಶ್ನೆ.

"ಮಂಜುನಾಥ, ಮುರುಡೇಶ್ವರ ಇತ್ಯಾದಿ ಕೈಲಾಪತಿ ಶಿವನ ಪ್ರತೀಕ. ಅದಕ್ಕಾಗಿ ವರ್ಣನೆ ಮಾಡುವಾಗ ಗಿರಿಜಾಪತಿ, ಗೌರಿವರ, ಕೈಲಾಸನಾಥ ಎಂದು ಬಣ್ಣಿಸಲಾಗುವುದು. ಇಷ್ಟಲಿಂಗ ಬ್ರಹ್ಮಾಂಡದ ಆಕಾರದಲ್ಲಿ ದೇವರ ಕುರುಹು. ಅದಕ್ಕಾಗಿ ಗುರು ಬಸವಣ್ಣನವರು "ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ. ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ, ಲಿಂಗದೇವಯ್ಯಾ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ." ಎಂದು ಹೇಳಿದ್ದಾರೆ. ಹೀಗೆ ಸ್ಥಾವರಲಿಂಗವು ಶಿವನ ಕುರುಹು; ಇಷ್ಟಲಿಂಗವು ದೇವರ ಕುರುಹು ಎಂದು ಹೇಳಿದೆನು.

ದಂಪತಿಗಳು ಹೊರಡುವ ಮುನ್ನ," ಪ್ರತಿ ವರ್ಷ 10 ದಿವಸಗಳನ್ನು ಪ್ರಕೃತಿ ಚಿಕಿತ್ಸೆಗಾಗಿ ಮೀಸಲಿಡಿ. ನಾವು ಆ ದಿನಗಳನ್ನು ಮೀಸಲಿಡುತ್ತೇವೆ. ಊರಿಗೆ ಹೊರಡುವ ದಿವಸ ಕ್ಷೇತ್ರ ದರ್ಶನ ಮಾಡಲು ವ್ಯವಸ್ಥೆ ಮಾಡುತ್ತೇವೆ. ಒಬ್ಬ ಹುಡುಗ ಬಂದು ತಮ್ಮನ್ನು ಕರೆದೊಯ್ದು ಎಲ್ಲವನ್ನು ತೋರಿಸುತ್ತಾನೆ. ಎಂದರು.
7-2-2016ರಂದು ಸುಪ್ರಭಾತದಲ್ಲಿ ಸ್ನಾನ ಪೂಜೆ ಮುಗಿಸಿ ಇಡ್ಲಿ-ಚಟ್ನಿಯನ್ನು ತಿಂದು ಸಿದ್ಧವಾದೆವು. ದಿನಾಲೂ ಸಪ್ಪೆ ಪಲ್ಯ-ಚಟ್ನಿ ತಿಂದು ಸಾಕಾಗಿರುತ್ತದೆ. ಭಾನುವಾರ ಇಡ್ಲಿ ಕೊಡುತ್ತಾರೆ ಎಂದು ಆಸೆಯಿಂದ ಸಾಧಕರು ಕಾಯುತ್ತಿರುತ್ತಾರೆ. ಆದರೆ ಅದು ಉಪ್ಪು ಇಲ್ಲದ ಸಪ್ಪೆ ಇಡ್ಲಿ. ಪುನಃ ನಿರಾಶೆ."ಎಂದು ಶ್ರೀ ಹರ್ಷೇಂದ್ರ ಕುಮಾರ್ ನಗೆಯಾಡಿದ್ದರು. ನಮ್ಮ ಚಿಕಿತ್ಸೆ ಮುಗಿದು ಹೊರಟಾಗ ಕೊಟ್ಟ ಇಡ್ಲಿ-ಚಟ್ನಿ ಸಹಜ ರುಚಿಯಿಂದ ಕೂಡಿದ್ದವು. ಅಡಿಗೆ ಮನೆ ಅತಿ ಶುಭ್ರ. ವೈದ್ಯರು ಹೇಳಿದಂತೆ ಬೇರೆ ಬೇರೆ ಪದಾರ್ಥ ಕೊಡುವರು ನಾನು ಹಾಗಲಕಾಯಿ ರಸ ಕುಡಿಯಲು ಅಲ್ಲಿ ಅಭ್ಯಾಸ ಮಾಡಿಕೊಂಡೆ.

ಶ್ರೀ ವೀರೇಂದ್ರ ಹೆಗ್ಗಡೆಯವರ ಸಂದರ್ಶನ

ಧರ್ಮಸ್ಥಳದಲ್ಲಿರುವ ಶ್ರೀ ವೀರೇಂದ್ರ ಹೆಗ್ಗಡೆಯವರ ಭೇಟಿಗೆ ಹೋದೆವು. ಅವರ ಹಳೆಯ ಮನೆಯ ನವೀಕರಣ ನಡೆಯುತ್ತಿರುವುದರಿಂದ ಕಾರಣ ಬೇರೊಂದು ವಿಶಾಲವಾದ ಗೃಹದಲ್ಲಿದ್ದಾರೆ. ಹೂಗುಚ್ಛ ಮತ್ತು ಹಣ್ಣಿನ ತಟ್ಟೆ ಒಯ್ದಿದ್ದೆವು. ಶುಭ್ರ ಶ್ವೇತ ವಸನಧಾರಿ, ಸರಳತೆಯೇ ಮೂರ್ತಿವೆತ್ತ ಶ್ರೀ ಹೆಗ್ಗಡೆಯವರು ಬಂದಾಗ ಅವನ್ನು ಅರ್ಪಿಸಿದೆವು. "ಎಲ್ಲಾ ಚೆನ್ನಾಗಿ ಆಯಿತಾ? ಎಂದು ಕೇಳಿದರು. "ಪ್ರತಿ ವರ್ಷ ಸಮಯ ನಿಗದಿಪಡಿಸಿಕೊಂಡು ತಪ್ಪದೆ ಬನ್ನಿರಿ."ಎಂದರು. ಅಷ್ಟರಲ್ಲಿ ಅವರ ಶ್ರೀಮತಿ ಹೇಮಾವತಿ ಬಂದರು. ಅವರ ಪರಿಚಯ ಮಾಡಿಕೊಟ್ಟರು. ಸ್ವಲ್ಪ ದೂರದಲ್ಲಿ ಒಂದು ಕಟ್ಟೆ, ಅದರ ಮೇಲೊಂದು ಕುರ್ಚಿ ಇದ್ದಿತು. ನಮ್ಮ ಜೊತೆ ಬಂದಿದ್ದ ನಿವೃತ್ತ ಶಿಕ್ಷಕಿ ಶರಣೆ.ಚಂದ್ರಮ್ಮ ಹೇಳಿದರು. "ಗುರು ಬಸವಣ್ಣನವರ ಕಾಲದಲ್ಲಿ ಪರುಷ ಕಟ್ಟೆ ಮೇಲೆ ಕುಳಿತು ಅವರು ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತಿದ್ದರು ಎಂದು ಕೇಳಿದ್ದೇವೆ. ಶ್ರೀ ವೀರೇಂದ್ರ ಹೆಗ್ಗಡೆಯವರು ಅಲ್ಲಿ ಕುಳಿತು ಭಕ್ತರ ಸಂಕಷ್ಟಗಳನ್ನು ಕೇಳುತ್ತಾರೆ. ಆರ್ಥಿಕ ನೆರವು ಕೇಳಿದವರಿಗೆ ಕೊಡುತ್ತಾರೆ."ಎಂದರು.

"ನೀವು ಇಲ್ಲಿಂದ ನೇರವಾಗಿ ಹೊರಡುತ್ತಿದ್ದೀರಿ. ಮಧ್ಯಾಹ್ನದ ಊಟಕ್ಕೆ ಹಾಸನದಲ್ಲಿ ಮಂಜುನಾಥೇಶ್ವರ ಆಯುರ್ವೇದಿಕ್ ಕಾಲೇಜ್ ಇದೆ. ಅಲ್ಲಿ ಊಟಕ್ಕೆ ವ್ಯವಸ್ಥೆ ಮಾಡಿರುತ್ತಾರೆ. ಊಟ ಮಾಡಿ, ಒಂದು ಗಂಟೆ ವಿಶ್ರಾಂತಿ ಪಡೆದು ಬೆಂಗಳೂರಿಗೆ ಪ್ರಯಾಣ ಬೆಳೆಸಿರಿ." ಎಂದು ಶ್ರೀ ವೀರೇಂದ್ರ ಹೆಗ್ಗಡೆಯವರು ನುಡಿದಾಗ ಅವರ ಮುಂದಾಲೋಚನೆ, ಸಮಯ ಪ್ರಜ್ಞೆ, ಮಾತೃಹೃದಯ ಕಂಡು ಸೋಜಿಗವಾಯಿತು. ಏಕೆಂದರೆ ನಮಗೂ ಮಧ್ಯಾಹ್ನದ ಪ್ರಸಾದಕ್ಕೆ ಏನು ಮಾಡುವುದು ಎಂಬ ಚಿಂತೆ ಕಾಡುತ್ತಿತ್ತು. ಅದನ್ನು ಅರಿತಂತೆ ಶ್ರೀ ಹೆಗ್ಗಡೆ ಬಗೆಹರಿಸಿಬಿಟ್ಟರು. ಅವರಿಂದ ಬೀಳ್ಕೊಂಡು ಶ್ರೀ ಮಂಜುನಾಥನ ದರ್ಶನ ಪಡೆದೆವು. ಶರಣ-ಆರ್.ಬಿ.ಹೆಬ್ಬಳ್ಳಿ ಫೋನ್ ಮಾಡಿ. "ದಾಸೋಹದ ಮನೆ, ಅಡಿಗೆ ಮನೆ, ಉಗ್ರಾಣ ನೋಡಿಬನ್ನಿರಿ"ಎಂದಿದ್ದರು. ಸ್ವಲ್ಪ ದೂರ ಮುಂದೆ ಹೋಗಿದ್ದ ಕಾರನ್ನು ತಿರುಗಿಸಿ

ಅಕ್ಕನ ಅಮರವಾಣಿ ಭಾಗ-27



ಹಿಂದಿನ ಸಂಚಿಕೆಯಿಂದ....

ಷಡ್ ಭ್ರಮೆಗಳೆಂದರೆ ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮ. ನಾನು ಶ್ರೇಷ್ಠ ಜಾತಿಯವನು ಶ್ರೇಷ್ಠ ವರ್ಣದವನು, ಚತುರಾಶ್ರಮಗಳಲ್ಲಿ ಒಂದರವನು, ಶ್ರೇಷ್ಠ ಕುಲದವನು, ಶ್ರೇಷ್ಠ ಗೋತ್ರದವನು, ಶ್ರೇಷ್ಠ ನಾಮದವನು ಎಂಬುದು ಭ್ರಮೆ. ಲಿಂಗಾಯತ ಧರ್ಮವು ಈ ಯಾವ ಭ್ರಮೆಗಳನ್ನೂ ಮಾನ್ಯ ಮಾಡುವುದಿಲ್ಲ. ಪೂಜೆ ಮಾಡಿಸುವಾಗ ದೇವಾಲಯಗಳಲ್ಲಿ ಅರ್ಚಕರು ನಿಮ್ಮ ವರ್ಣ, ಜಾತಿ, ಗೋತ್ರ ಯಾವುದು ಎಂದು ಕೇಳುವರು. ಮೊದನೆಯದಾಗಿ ಗುಡಿಗಳಿಗೆ ಹೋಗಿ ಪೂಜಾರಿಯಿಂದ ಪೂಜೆ ಮಾಡಿಸಿಕೊಳ್ಳವುದೇ ತಪ್ಪು. ವರ್ಣ,

ಜಾತಿ, ಗೋತ್ರಗಳಿಲ್ಲದ ಲಿಂಗಾಯತರು ಅವನ್ನು ಹೇಳುವುದು ಎರಡನೆಯ ತಪ್ಪು. ಷಡ್ಭಾವ ವಿಕಾರಗಳು ಯಾವುದೆಂದರೆ ಕಾಯವಿಕಾರ, ಇವಾವ್ಯೆ ನಾನಲ್ಲ (ಆತ್ಮನಲ್ಲ), ಷಟ್‌ಕರ್ಮಗಳಾದ ಸಪ್ತಧಾತುಗಳಾದ ರಸ, ರುದಿರ, ಮಾಂಸ, ಮೇಧಸ್ಸು, ಅಸ್ಥಿ ಮಜ್ಜೆ, ಶುಕ್ಲ –ಇವ್ಯಾವೂ ನಾನಲ್ಲ. ತನುತ್ರಯಗಳಾದ ಸ್ಥೂಲ, ಸೂಕ್ಷ್ಮ, ಕಾರಣ – ಇವು ನಾನಲ್ಲ, ಜೀವತ್ರಯಂಗಳಾದ ವಿಶ್ವ, ತೈಜಸ, ಪ್ರಾಜ್ಞ ಇವು ನಾನಲ್ಲ. ಮಲತ್ರಯಗಳಾದ ಕಾರ್ಮಿಕ, ಮಾಯಾ ಮತ್ತು ಆಣವಗಳು ನಾನಲ್ಲ, ಮನ ತ್ರಯಂಗಳಾದ ಜಾಗ್ರತ ಮನ, ಸುಪ್ತಮನ, ಘನಮನ – ಇವು ನಾನಲ್ಲ. ಗುಣತ್ರಯಂಗಳಾದ ಸಾತ್ವಿಕ, ರಾಜಸ ಮತ್ತು ತಾಮಸ – ಇವು ನಾನಲ್ಲ. ಭಾವ ಕ್ರಿಯಂಗಳು ಸದ್ಭಾವ, ಚಿದ್‌ಭಾವ, ಆನಂದ ಭಾವ –ಇವು ನಾನಲ್ಲ. ತಾಪತ್ರಯಗಳಾದ ಅಧಿಭೌತಿಕ, ಅಧಿದ್ಯೆವಿಕ, ಆಧ್ಯಾತ್ಮಿಕ –ಇದಾವೂ ನಾನಲ್ಲ. ಅಂತಃಕರಣಗಳಾದ ಚಿತ್ತ, ಮನ, ಬುದ್ಧಿ, ಅಹಂ, ಭಾವ –ಇವಾವೂ ನಾನಲ್ಲ. ಇವೆಲ್ಲವೂ ತೋರಿಕೆಯವು. ನಿಜವಾದ ವಸ್ತು ಆತ್ಮ. ಇವೆಲ್ಲವೂ ನನ್ನ (ಆತ್ಮ)ಅಧೀನದಲ್ಲಿರುತ್ತವೆ. ನಾನು (ಆತ್ಮ) ಇವುಗಳ ಅಧೀನವಲ್ಲ. ನಾನು ತೂರ್ಯ, ತೂರ್ಯಾತೀತವಾದ ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣತ್ವವೆಂಬ ಪಂಚಲಕ್ಷಣಗಳನ್ನು ಹೊಂದಿದ ಪರಮಾತ್ಮವೇ ಸರಿ. ಇದನ್ನು ತಿಳಿಯುತ್ತಲೇ ಅನಿತ್ಯದ ಬೆಸುಗೆ ಬಿಡಲಿಲ್ಲ. ನಿರಾಳದಲ್ಲಿ ನಿಜವನ್ನು ಪಡೆಯಲಾಗಲಿಲ್ಲ. ಭೌತಿಕ ತತ್ವ ಸಂಬಂಧಿಯಾಗಿಯೆ ಇದ್ದೆನು. ಇನ್ನು ಆಚಾರ ಸಂಬಂಧ ಅಗತ್ಯವಾಯಿತು.

ಮಾನವರ ಈ ಪಡಿಪಾಟಲನ್ನು ನೋಡಿ ಪರಮಾತ್ಮನು ಜೀವಿಗಳ ಮೇಲಿನ ಕರುಣೆಯಿಂದ ಕೆಳಗಿನಂತೆ ಅನುಗ್ರಹಿಸಿದನು. ಪರಬ್ರಹ್ಮನಾದ ನಿತ್ಯ ನಿರಾಳ ನಿಃಶೂನ್ಯ ಲಿಂಗವು ತನ್ನ ಲೀಲಾವಿಲಾಸದಿಂದ ಸುನಾದ ಬಿಂದು ಪ್ರಕಾಶ ತೇಜೋಮೂರ್ತಿಯಾಗಿ ನಿಂತಾಗ

ಧರ್ಮಸ್ಥಳದ ಶಾಂತಿವನದಲ್ಲಿ ಕೆಲವೊಂದು ದಿನ–2

ನೋಡಲು ಹೋದೆವು. ಅದೇ ಸಮಯಕ್ಕೆ ಸರಿಯಾಗಿ ಹರ್ಷೇಂದ್ರ ಬಂದು ಬಿಟ್ಟರು. ವಿಶಾಲವಾದ ಭವ್ಯವಾದ ಅನ್ನಪೂರ್ಣೇಶ್ವರಿ ಭೋಜನಾಲಯ. ಒಂದು ಸಾಲಿನಲ್ಲಿ ನೂರಾ ಹತ್ತು ಜನ ಕುಳಿತುಕೊಳ್ಳಬಹುದು, ಹಾಗೇ 1 ಸಾಲಿನಲ್ಲಿ ಒಮ್ಮೆಗೆ ಊಟ. ದಿನಕ್ಕೆ ಮೂವತ್ತರಿಂದ ನಲವತ್ತು ಸಾವಿರ ಜನ ಪ್ರಸಾದ ಸ್ವೀಕರಿಸುವರು. ಅಡಿಗೆ ಮನೆಯಲ್ಲಿ ಒಂದು ಕುರ್ಚಿ ಹಾಕಿ ಕುಳ್ಳಿರಿಸಿದರು.

ದಾಸೋಹವು ಹಿಂದಿನಿಂದಲೇ ಪ್ರಾರಂಭವಾಗಿದ್ದರೂ ಅದು ವಿಸ್ತೃತವಾಗಿ ಬೆಳೆದಿರುವುದು ಶ್ರೀ ವೀರೇಂದ್ರ ಹೆಗ್ಗಡೆಯವರ ಕಾಲದಲ್ಲಿ. ಒಬ್ಬ ವ್ಯಕ್ತಿಯು ಸಂಕಲ್ಪ ಮಾಡಿದರೆ ಏನೆಲ್ಲವನ್ನು ಸಾಧಿಸಬಲ್ಲ ಎಂಬುದಕ್ಕೆ ಅವರು ಉದಾಹರಣೆ. ಜೇನ್ಗೂಡಿನಲ್ಲಿ ರಾಣಿ ಜೇನಿನ ನೇತೃತ್ವದಲ್ಲಿ ಕಾರ್ಮಿಕ ಜೇನುಗಳು ಜೇನುತುಪ್ಪ ಸಂಗ್ರಹಿಸುವ ಕಾರ್ಯವನ್ನು ಮಾಡುವಂತೆ ಶ್ರೀ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ಕಾರ್ಯಗಳು ನಡೆಯುತ್ತಿವೆ. ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿಯ ಸಾಕಾರವಾದ ಅವರು ಗ್ರಾಮೀಣಾಭಿವೃದ್ಧಿ ಸಂಘಟನೆಯ ಕಾರ್ಯ ಅಮೋಘ ಮತ್ತು ಅದ್ಭುತ. ಅವರಿಗೆ ಮತ್ತು ಅವರ ಪರಿವಾರಕ್ಕೆ ಸೃಷ್ಟಿಕರ್ತ ಲಿಂಗದೇವ ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದ ಕರುಣಿಸಲಿ. ನಮ್ಮ ಚಿಕಿತ್ಸೆಯ ಬಿಲ್ ನಲವತ್ತೆಂಟು ಸಾವಿರ ಆಯಿತು. ಖರ್ಚನ್ನು ಭರಿಸುತ್ತೇವೆ ಎಂದು ಹೇಳಿದ್ದ ಆರ್.ಬಿ.ಹೆಬ್ಬಳ್ಳಿ, ಶರಣ.ಈ ಕೃಷ್ಣಪ್ಪ, ಭದ್ರಾವತಿ ಶರಣ-ಶರಣೆಯರು ಅವರುಗಳು. ಯಾರಿಂದ ಹಣ ಪಡೆದಿರಿ, ಎಲ್ಲರಿಗೂ ಖರ್ಚು ಹಂಚಿದಿರಾ? ಎಂದು ನೀವು ಕೇಳುವುದು ನಿಜ. ಬಿಲ್ ಕೊಡಬೇಕೆಂದು ಆಫೀಸ್‌ನಲ್ಲಿ ವಿಚಾರಿಸಿದಾಗ ಡಾ|| ಪ್ರಶಾಂತಶೆಟ್ಟಿ ಹೇಳಿದರು, “ದೊಡ್ಡವರು (ಶ್ರೀ ವೀರೇಂದ್ರ ಹೆಗ್ಗಡೆ) ಹೇಳಿದ್ದಾರೆ. ಮಾತಾಜಿಯವರ ಚಿಕಿತ್ಸೆ ಉಚಿತವಾಗಿ ಆಗಬೇಕು ಹಣ ಪಡೆಯ ಬೇಡಿರಿ.”ಎಂದು. ಚಿಕಿತ್ಸೆ ಫ್ರೀ ಆದ್ದರಿಂದ ನೀವೆಲ್ಲ ಧನ್ಯವಾದ ಹೇಳಿ ಬಿಡಿ. ಹಾಗೆಯೇ ಒತ್ತಾಯ ಮಾಡಿ ನನ್ನನ್ನು ಕಳಿಸಿದ್ದಕ್ಕೆ ನಿಮಗೂ ನನ್ನ ಧನ್ಯವಾದ.

ಶರೀರದ ಪಂಚೀಕರಣ					
	ಪೃಥ್ವಿ	ಜಲ	ಅಗ್ನಿ	ವಾಯು	ಆಕಾಶ
ಪೃಥ್ವಿ	ಗುದ	ಮೂಗು	ಗಂಧ	ಪ್ರಾಣ	ಚಿತ್ತ
ಜಲ	ಗುಹ್ಯ	ನಾಲಿಗೆ	ರಸ	ಅಪಾನ	ಮನ
ಅಗ್ನಿ	ಪಾದ	ಕಣ್ಣು	ರೂಪ	ಉದಾನ	ಬುದ್ಧಿ
ವಾಯು	ಪಾಣಿ	ಚರ್ಮ	ಸ್ಪರ್ಶ	ವ್ಯಾನ	ಅಹಂಕಾರ
ಆಕಾಶ	ವಾಕ್	ಕಿವಿ	ಶಬ್ದ	ಸಮಾನ	ಭಾವ

ಸೃಷ್ಟಿಕರ್ತನಾಗಿ ಮಹಾಲಿಂಗ ಎಂಬ ಹೆಸರು ಪಡೆಯಿತು. ಈ ಮಹಾಲಿಂಗವು ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನ ಶಕ್ತಿ, ಕ್ರಿಯಾಶಕ್ತಿ ಎಂಬ ಪಂಚಶಕ್ತಿಗಳಿಂದ ಕೂಡಿ ಪಂಚಸಾದಾಖ್ಯ ಎನಿಸಿತ್ತು. ಇದು ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹ ಎಂಬ ಪರಮಾತ್ಮನ ಐದು ಕರ್ತವ್ಯಗಳನ್ನು ಸಂಕೇತಿಸುತ್ತವೆ. ಹೀಗಾಗಿ ದೇವರಿಗೆ 5 ಮುಖಗಳೆಂದು ಹೇಳಲಾಗುತ್ತದೆ. ಅವು ಯಾವುವೆಂದರೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ. ಇವುಗಳಿಂದ ಲಿಂಗಾಯನಮಃ ಎಂಬ ಪಂಚಾಕ್ಷರಿ ಉತ್ಪತ್ತಿಯಾಯಿತು. ಬ್ರಹ್ಮಾಂಡವನ್ನು ತುಂಬಿದ ಈ ಪಂಚಾಕ್ಷರಗಳಿಂದ ಪಂಚಕಲೆಗಳು ಉತ್ಪತ್ತಿಯಾದವು. ಪಂಚಕಲೆಗಳೆಂದರೆ....

ಪಂಚಕಲೆಗಳಾದ ಕಲಾ, ವಿದ್ಯಾ, ರಾಗ, ಕಾಲ, ನಿಯತಿ – ನಾನಲ್ಲ. ಪಂಚಕಲೆಗಳಿಂದ ಆತ್ಮವು ಸಂಕೋಚಗೊಳ್ಳುವುದು. ‘ಕಲಾ’ಎಂಬ ಆವರಣದಿಂದ ಸರ್ವ ಶಕ್ತತ್ವನ್ನು ಕಳೆದುಕೊಂಡು ಅಲ್ಪಶಕ್ತವಾಗುವುದು. ‘ವಿದ್ಯಾ’ಎಂಬ ಆವರಣದಿಂದ ಸರ್ವಜ್ಞತ್ವ ಹೋಗಿ ಅಲ್ಪಜ್ಞತ್ವ ಬರುವುದು. ‘ರಾಗ’ಎಂಬ ಆವರಣದಿಂದ ಪೂರ್ಣತ್ವ ಹೋಗಿ ಅಪೂರ್ಣತ್ವ ಬರುವುದು.

ಕಾಲ ಎಂಬ ಆವರಣದಿಂದ ನಿತ್ಯತ್ವವು ಹೋಗಿ ಅನಿತ್ಯತ್ವವು ಬರುವುದು. ನಿಯತಿ ಎಂಬ ಆವರಣದಿಂದ ಸರ್ವ ವ್ಯಾಪಕತ್ವವೂ ಹೋಗಿ ಅಲ್ಪ ವ್ಯಾಪಕತ್ವವು ಬರುವುದು.

ಪಂಚಶಕ್ತಿಗಳಾದ ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳಿಂದ ಚಿತ್ತ, ಮನ, ಬುದ್ಧಿ ಅಹಂಕಾರ, ಭಾವ ಎಂಬ ಅಂತಃಕರಣಗಳ ಉತ್ಪತ್ತಿ, ಅವುಗಳಿಂದ ಶಬ್ದ, ಸ್ಪರ್ಶ, ರೂಪ, ರಸ,ಗಂಧ ಎಂಬ ಬ್ರಹ್ಮಾಂಡದ ತನ್ಮಾತ್ರೆಗಳ ಉತ್ಪತ್ತಿ. ಇವುಗಳಿಂದ ಬ್ರಹ್ಮಾಂಡದ ಪಂಚಭೂತಗಳಾದ ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿಯ ಉತ್ಪತ್ತಿ. ಈ ಪಂಚಭೂತಗಳು ಪಂಚೀಕರಣವನ್ನು ಹೊಂದು 25 ತತ್ವಗಳ ಶರೀರವಾಗುವುದು. ಈ ಶರೀರವು ಆತ್ಮನಿಗೆ ಆವರಣವಾಗುವುದು.


ಪಂಚವಿಂಶತಿ ತತ್ವಗಳಲ್ಲಿ ಬರುವ ಅಂಗಗಳೆಂದರೆ:

1. ಪಂಚ ಕರ್ಮೇಂದ್ರಿಯಗಳು – ವಾಕ್, ಹಸ್ತ, ಪಾದ, ಗುಹ್ಯ, ಗುದ
2. ಪಂಚ ಜ್ಞಾನೇಂದ್ರಿಯಗಳು– ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ
3. ಪಂಚ ವಿಷಯಗಳು– ಶಬ್ದ, ಸ್ಪರ್ಶ, ರೂಪ, ರಸ, ಗಂಧ
4. ಪಂಚ ಅಂತಃಕರಣ –ಚಿತ್ತ, ಮನ,ಬುದ್ಧಿ ಅಹಂಕಾರ, ಭಾವ
5. ಪಂಚ ಪ್ರಾಣಗಳು – ಪ್ರಾಣ,ಅಪಾನ, ವ್ಯಾನ, ಉದಾನ, ಸಮಾನ

ಪರಮಾತ್ಮನ ಚಿದಂಶಿಕವಾದ ಆತ್ಮವು ಹೀಗೆ ಶರೀರವನ್ನು ಹೊದ್ದು ಭವಕ್ಕೆ ಬರುತ್ತದೆ.

ಹಮ್ಮಿನ ದುರ್ಗದ ಅಮ್ಮಾಜಿ...









ಹಮ್ಮಿನ ದುರ್ಗದ ಅಮ್ಮಾಜಿ...
ಬಂದಿಹಳು ಬಂದಿಹಳು ಬಸವಾತ್ಮಜೆ ಭುವಿಗೆ
ಜಾತಿವಾದಿಗಳ ಜಾಲಾಡುತ್ತ
ಧರ್ಮ ವಿರೋಧಿಗಳ ಧರ್ಪವಡಗಿಸುತ ॥

'ಹಮ್ಮಿನ ದುರ್ಗಕೆ ಅಮ್ಮಾಜಿ ಬರ್‍ತಾಳೆ' ಎಂಬ
ನುಡಿ ಹುಸಿಯಾಗಲಿಲ್ಲ ಸ್ತ್ರೀ ಪೀಠವ ಮಾಡಿ
ಪುರುಷರಹಂಕಾರವಡಗಿಸಿ ಸ್ತ್ರೀ ಸ್ವಾತಂತ್ರ್ಯ ನೀಡಿ
ಪ್ರಥಮ ಸ್ತ್ರೀ ಜಗದ್ಗುರುವಾಗಿ ಪೀಠವನೇರಿದಳು ॥
'ನಾರಿ ಪುರುಷರ ಕೊಬ್ಬು ಮುರಿವಂತ ಕಾಲ'
ಮುಂದೆ ಬರುವುದೆಂದರುಹಿದ ಶರಣವಾಣಿ
ವಚನಶಾಸ್ತ್ರದ ಸತ್ಯ ದಿಟ್ಟತನದಿ ಸಾರಿ
ಸರ್ವರ ಮನ ಮನದಿ ತುಂಬಿದೆ ಬಸವ ತತ್ವ ॥

ಕರ್ಮದ ಪಾಪಿಗಳ ನಿರ್ಮೂಲ ಮಾಡಿ
ವಚನಂಗಳ ಹಸನಿಸಿ ಬಸವ ಧರ್ಮಾಚಾರ ಕಲಿಸಿ
ಜಾತಿ ವಿಜಾತಿ ಎನದೆ ಲಿಂಗದೀಕ್ಷೆಯ ನೀಡಿ
ಚೊಕ್ಕ ಲಿಂಗಾಯತ ಧರ್ಮ ಭದ್ರಗೊಳಿಸಿಹಳು ॥

ಕೂಡಲ ಸಂಗಮದಿ ಬಂದು ಮಾತೆ ನೆಲೆಸಿ
ಲಿಂಗಾಯತರಿಗೆ ಇದೇ ಧರ್ಮಕ್ಷೇತ್ರವೆಂದರುಹಿದಳು
ಶರಣ ಮೇಳ ಮಾಡಿ ಬಸವ ಸಂತಾನಕೆ ಕರೆಯಲು
ಲಕ್ಷ ಲಕ್ಷ ಜನ ಬಂದು ಜ್ಞಾನಸಾಗರದಿ ಮಿಂದಿಹರು ॥

ನೀಲಾಂಬಿಕೆಯ ನುಡಿ ಸತ್ಯ ಮಾಡಿ ತೋರಿಹಳು
ದೇಶವಿದೇಶದಿ ತತ್ವಪ್ರಸಾರಗೈದಿಹಳು ಅಬ್ಬರದಿ
ಭಕ್ತಿ ಭಿಕ್ಷೆ ಬೇಡಿ ಬಸವ ತತ್ವ ಸೂರೆಗೊಂಡಿಹಳು
ಬಸವಜ್ಯೋತಿ ಹೊತ್ತಿಸಿ ಕರೆದಿಹಳು ಕಲ್ಯಾಣ ಪರ್ವಕೆ ॥

ಬಸವ ಕಾರ್ಯಕ್ಷೇತ್ರ ಕಲ್ಯಾಣಕೆ ಮಾತೆ ಬರಲು
ಕೊಂಡಿ ಸಂತತಿ ತಳಮಳಗೊಂಡು ನಡೆಸಿತು ಹೋರಾಟ
ಯಾರಾಟ ನಡೆಯಲಿಲ್ಲ ಕಷ್ಟಪಟ್ಟು ಬಂದರು ಭಕ್ತಜನ
ಲೀಲಾವಿಶೇಷ ಲಿಂಗದೇವನ ನೆನೆದು ನಡೆಸಿಹರು ಪರ್ವ ॥

* ಲೇಖಕರು: ಮಾತೆ ಜ್ಞಾನೇಶ್ವರಿ, ಬೆಂಗಳೂರು

ಸಮಗ್ರ ಮಾಹಿತಿ

ಮಹಾಮನೆ ಗವಿಯ ಸ್ವಚ್ಛತಾ ಕಾರ್ಯ - 8

"ಸತ್ಯ ಶರಣರು ಉಳವಿಗೆ ಸಾಗಿ ಬಸವಯ್ಯ
ಮಿತ್ಯದಿ ಕಲ್ಯಾಣ ಹಾಳೋ ಬಸವಯ್ಯ
ಮತ್ತೆ ನೀವು ಬರುವದಕೆ ಬಸವಯ್ಯ
ಸತ್ಯ ಯೇಳ್ನೂರು ಎಪ್ಪತ್ತೇಳು ವರುಷ ಬಸವಯ್ಯ"
........ಶರಣ ಮುಗ್ದ ಸಂಗಯ್ಯನವರು

ಉಳವಿ ಮಹಾಮನೆ ಸ್ವಚ್ಛತಾ ಕಾರ್ಯವು ಏ.14, 2016 ರಿಂದ 19ರ ವರೆಗೆ ಜರುಗಲಿದ್ದು, ಭಾಗವಹಿಸಲು ಇಚ್ಛಿಸುವ ಶರಣರೂ ಬರಬೇಕೆಂದು ತಮ್ಮಲ್ಲಿ ನಿವೇದನೆ.

ಬೈಲಹೊಂಗಲ ರಾಷ್ಟ್ರೀಯ ಬಸವದಳದ ಮುಂದಾಳತ್ವದಲ್ಲಿ 2009 ರಿಂದ ಪ್ರಾರಂಭವಾದ ಈ ಕಾರ್ಯವು ಈಗ 8ನೇ ವರ್ಷದತ್ತ ಸಾಗುತ್ತಿದೆ. ಪ್ರಾರಂಭದಲ್ಲಿ ನಾವು ಮಾಡಿದ ಸಂಕಲ್ಪವೂ ಕೈಸಾರುತ್ತ ಬರುವದು ಮಹಾಮನೆ ಗವಿಯಲ್ಲಿ ಗೋಚರವಾಗುತ್ತಿದೆ. 7ನೇ ಸ್ವಚ್ಛತಾ ಕಾರ್ಯದಲ್ಲಿ ಶರಣರೇ ಗಚ್ಚನ್ನು ತಯಾರು ಮಾಡಿ ಹೂಳು ಮುಚ್ಚಿದ ಸ್ಥಳವೊಂದು ಕಾಣಿಸಿಕೊಂಡಿದೆ. ಆದರೆ ಹೂಳು ಹಾಕಿದ ಶರಣರ ಉದ್ದೇಶ ತಿಳಿದು ಬಂದಿಲ್ಲಾ. ಬಹುಶಃ ಬರುವ ಕಾರ್ಯದಲ್ಲಿ ಅದರ ಉದ್ದೇಶ ಸಫಲವಾಗಲೆಂದು ಎಲ್ಲರೂ ಸಂಕಲ್ಪ ಮಾಡೋಣ. ಆ ಕಾರ್ಯ ಸಾಧ್ಯವಾದಲ್ಲಿ ಸಫಲತೆ ಪೂಜ್ಯ ಮಾತಾಜಿ ಅವರ ಪಾದಕ್ಕೆ ಸಲ್ಲುತ್ತದೆ.

8ನೇ ಸ್ವಚ್ಛತಾ ಕಾರ್ಯವು ಪೂಜ್ಯ ಮಾತಾಜಿ ಅವರ ಕೃಪಾಶಿರ್ವಾದದೊಂದಿಗೆ ಪೂಜ್ಯ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಸದ್ಗುರು ಸತ್ಯಾದೇವಿ ಮಾತಾಜಿ ಅವರ ಸಾನಿದ್ಯದಲ್ಲಿ ಜರಗುವುದು. ಕಾರಣ ತಾವೆಲ್ಲರೂ ಉಳವಿಯತ್ತ ಬರಲು ಕೋರಿಕೆ. ಈ ಲೇಖನ ಓದಿದ ತಾವೆಲ್ಲರೂ ಉಳವಿಗೆ ಬರುವ ಹೊತ್ತಿನವರೆಗೂ ಪ್ರಾತಃ ಕಾಲದಲ್ಲಿ ಪೂಜೆ ಮಾಡಿ ಬಸವ ನಾಮಾವಳಿ ಮಾಡಿ ಏರಿಸಿದ ಅಕ್ಷತೆಯನ್ನು ಸಂಗ್ರಹಮಾಡಿಕೊಂಡು ಬರಲು ವಿನಂತಿಸಿದೆ.

ಈ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತ ರಾಷ್ಟ್ರೀಯ ಬಸವದಳ ಹಿರೇಕೋಡಿ, ಬೆಳಗಾವಿ, ಬೆಂಗಳೂರು, ಭದ್ರಾವತಿ, ಅಸುಂಡಿ, ಸವದತ್ತಿ, ಕೊಪ್ಪಳ, ಹೊಸೂರ, ವಕ್ಕುಂದ, ಹುಬ್ಬಳ್ಳಿ, ಮೂಗಬಸವ, ಸಂಕೇಶ್ವರ, ಗೋಕಾಕ, ಇಚಲಕರಂಜಿ, ಕರಿಕಟ್ಟಿ, ಗಂಗಾವತಿ, ಇಟಗಿ ಇನ್ನುಳಿದ ಎಲ್ಲ ಶರಣರಿಗೂ ಶರಣಾರ್ಥಿಗಳನ್ನು ಸಲ್ಲಿಸುತ್ತಾ, ಮೊತ್ತೊಮ್ಮೆ ಈ ಕಾರ್ಯದಲ್ಲಿ ಭಾಗಿಯಾಗಲು ವಿನಂತಿಸಲಾಗುತ್ತಿದೆ. ಕಾರಣ ಪೂಜ್ಯ ಮಾತಾಜಿ ಅವರ ಅನುಮತಿ ಹಾಗೂ ಆಶಿರ್ವಾದದೊಂದಿಗೆ ಕಾರ್ಯವು ಭರದಿಂದ ಸಾಗಿದೆ. ಶಿವಪುರದ ಚನ್ನಬಸವೇಶ್ವರ ಸ್ವಾಮೀಜಿ ಅವರು ಆಶ್ರಯ ನೀಡಿದ್ದಾರೆ. ಸ್ಥಳೀಯ ಹಿರಿಯರಾದಂತಹ ಗೋಪಾಲಭಟ್ ನಮಗೆ ಪ್ರೋತ್ಸಾಹ ನೀಡಿದ್ದಾರೆ. ಮತ್ತು ಚನ್ನಬಸವೇಶ್ವರ ದೇವಸ್ಥಾನದ ಕಮೀಟಿ ಸಹ ಸಹಕಾರ ನೀಡುತ್ತಿದೆ. ಸೇವೆ ಮಾಡಲು ಇಚ್ಛೆ ಉಳ್ಳವರು ಸಾಧ್ಯವಾದಷ್ಟು ದಿನ ಉಳವಿಗೆ ಬಂದು ಕೈಜೋಡಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಆಗಮಿಸುವ ಶರಣರು ದಯವಿಟ್ಟು ನಿಮ್ಮ ವಿವರವನ್ನು ಈ ಕೆಳಕಾಣಿಸಿದ ಮೊಬೈಲ್ ಸಂಖ್ಯೆಗಳಿಗೆ ತಿಳಿಸಲು ಕೋರಿದೆ.

ಶರಣ ಜಿ. ಆರ್. ಕಟ್ಟಿ 9480818988, 9008869252
ಶರಣ ಎಸ್. ಎಸ್ .ವಾಲಿ 9945200343, 9449200343

ಮಹಾನ್ ಶರಣ

ಪೂಜ್ಯಶ್ರೀ ಡಾ.ಮಾತೆ ಮಹಾದೇವಿ

ಮಾ.13. 71ನೇ ವರ್ಧಂತಿ



ಶ್ರೀ ಮಾತಾಜಿಯವರು ಚಿನ್ಮೂಲಾದ್ರಿಯ ಚಿತ್ಕಳೆಯಾಗಿ 1946ರಲ್ಲಿ ಜನ್ಮಿಸಿ, ವಿಜ್ಞಾನ ತತ್ತ್ವಜ್ಞಾನ ಸ್ನಾತಕೋತ್ತರ ಪದವೀಧರೆಯಾಗಿ 1966ರಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರಿಂದ ಜಂಗಮ ದೀಕ್ಷೆ ಪಡೆದು, ಮಾತೆ ಮಹಾದೇವಿ ಎಂಬ ಅಭಿಧಾನ ತಾಳಿ, 1970ರಲ್ಲಿ ವಿಶ್ವನೂತನ ಸ್ತ್ರೀ ಜಗದ್ಗುರು ಪೀಠವನ್ನಲಂಕರಿಸಿ, ಭಕ್ತಿ-ಜ್ಞಾನ-ವಿರಕ್ತಿಗಳ ದಿವ್ಯ ಸಂಗಮವಾಗಿ ಶೋಭಿಸುತ್ತಿರುವರು.
ಪೂಜ್ಯ ಮಾತೆಯವರ ಮೊದಲ ಕಾದಂಬರಿ ಬಹುಮಾನ ವಿಜೇತ ಹೆಪ್ಪಿಟ್ಟ ಹಾಲು; ಅಕ್ಕಮಹಾದೇವಿಯ ಜೀವನವನ್ನು ಕುರಿತಾದ ತರಂಗಿಣಿ ಮಾತೆಯವರ ಹಸ್ತದಲ್ಲಿ ರೂಪು ಗೊಂಡ ದ್ವಿತೀಯ ಕಾದಂಬರಿ. ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿರುವ ಬಸವ ಧರ್ಮದ ಪರಮೋಚ್ಚ ಪೀಠವನ್ನೇರಿದ ಪ್ರಥಮ ಜಗದ್ಗುರುಗಳಾದ ಪೂಜ್ಯ ಪೂಜ್ಯ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಾತಾಜಿಯವರೇ ದ್ವಿತೀಯ ಪೀಠಾಧಿಕಾರಿಗಳಾಗಿದ್ದಾರೆ. ಲಿಂಗದೇವ ಎಂಬ ವಚನಾಂಕಿತವನ್ನು ವಿಶ್ವಗುರು ಬಸವಣ್ಣನವರ ವಚನಗಳಲ್ಲಿ ಸೇರಿಸುವ ಮೂಲಕ ಮಹತ್ವಪೂರ್ಣ ಸೈದ್ಧಾಂತಿಕ ಚೌಕಟ್ಟನ್ನು ನೀಡಿದ ಪ್ರತಿಭಾವಂತರು. ಮಾತಾಜಿ, ಬಸವಾತ್ಮಜೆ ಇವರ ಕಾವ್ಯನಾಮ. ಸಚ್ಚಿದಾನಂದ ಇವರ ವಚನ ಮುದ್ರಿಕೆ.

ಪೂಜ್ಯಶ್ರೀ ಮಾತಾಜಿಯವರ ಕುರಿತು ಕೆಲವೇ ಸಾಲುಗಳಲ್ಲಿ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವರೊಂದು ಜ್ಞಾನ ಹಾಗೂ ದಾಸೋಹ ಭಂಡಾರ, ಉತ್ತಮ ಕಲ್ಪನಾಶಕ್ತಿ ಉಳ್ಳವರು ಮತ್ತು ಅಂದುಕೊಂಡಿದ್ದನು ಸಾಧಿಸಿ ತೋರಿಸುವ ಛಲಗಾರರು. ಮಾತಾಜಿಯವರ ಕಲ್ಪನೆಗಿಂತ ಮೊದಲು ಗುರು ಬಸವಣ್ಣನವರೆಂದರೆ ಕುದುರೆ ಮೇಲಿನ ಪ್ರಧಾನಮಂತ್ರಿ ಮೂರ್ತಿ ಎಂಬುದೊಂದೇ ಇತ್ತು. ಮಾತಾಜಿಯವರು ಬಂದ ನಂತರ ಬಸವಣ್ಣನವರನ್ನು ವಿವಿಧ ರೂಪ ಗಳಲ್ಲಿ ನೋಡಬಹುದಾಯಿತು. ಗುರು ಬಸವಣ್ಣನವರನ್ನು ಸಾಕ್ಷಾತ್ ಗುರು ರೂಪದಲ್ಲಿ ನೋಡಲು ಸಾಧ್ಯವಾಗಿದೆ ಎಂದರೆ ಅದಕ್ಕೆ ಮಾತಾಜಿ ಅವರ ಕಲ್ಪನೆಯೇ ಕಾರಣ.

ಮೂಲ ಆಧಾಯಗಳಿಲ್ಲದಿದ್ದರೂ 108 ಅಡಿ ಎತ್ತರದ ಬಸವಪುತ್ಥಳಿಯನ್ನು ನಿರ್ಮಿಸಿ ಬಸವಸಂಸ್ಕೃತಿಯನ್ನು ಎಲ್ಲೆಡೆ ಎತ್ತಿ ಹಿಡಿದಿದ್ದಾರೆ. ಬಸವಣ್ಣ, ವಚನಸಾಹಿತ್ಯ ಹಾಗೂ ಲಿಂಗಾಯತ ಧರ್ಮದ ಸಂಪೂರ್ಣ ಅರಿವು ಹೊಂದಿರುವ ವ್ಯಕ್ತಿಯೊಬ್ಬರು ಪ್ರಸ್ತುತ ಈ ಭೂಮಿ ಮೇಲೆ ಇದ್ದಾರೆ ಎಂದರೆ ಅದು ಮಾತಾಜಿಯವರೊಬ್ಬರೇ ಎಂದರೆ ಇದು ಅತಿಶಯೋಕ್ತಿಯಾಗಲಾರದು.

ಇಷ್ಟಲಿಂಗೋಪಾಸನೆ

ವೈಜ್ಞಾನಿಕ ಅರಿವು

ಶ್ರೀ ಬಸವ ಕುಮಾರ ಸ್ವಾಮೀಜಿ



ವಾಕ್:-
ಮಾತುಗಳಲ್ಲಿ,
ಸ್ಪಷ್ಟತೆ, ಸತ್ಯತೆ,
ಶುದ್ಧತೆ ಇದ್ದರೆ ಅವು
ಮಂತ್ರಸ್ವರೂಪವಾಗುವುವು. ಆಗ

"ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ ಲಿಂಗದೇವನೆಂತೊಲಿವನಯ್ಯಾ?"
"ಮಾತು ಆಡಿದರೆ ಆಯಿತು, ಮುತ್ತು ಒಡೆದರಾಯ್ತು"
"ಮಾತು ಬಲ್ಲವ ತಾ ಸೋತು ಹೋಹುದೇ ಲೇಸು
ಮಾತಿಂಗೆ ಮಾತು ಮಥಿಸಲ್ಕೆ । ವಿಧಿ ಬಂದು
ಆತುಕೊಂಡಿಹುದು । ಸರ್ವಜ್ಞ... ಇದು ಪ್ರಸಾದಭೋಗ.

ಪಾಣಿ:- ಕೈಗಳು ಮೊಟ್ಟ ಮೊದಲನೆಯದಾಗಿ ದೀನರ, ದಲಿತರ, ಬಡವರ, ತಂದೆ-ತಾಯಿ, ಗುರು-ಹಿರಿಯರ ಸೇವೆ, ಲಿಂಗ ಪೂಜೆ, ಜಪ, ಯೋಗಾಸನ ಮಾಡಲು, ಅರ್ಥಪೂರ್ಣ

ಪತ್ರ ಬರೆಯಲು, ಕವಿತೆ ಬರೆಯಲು, ಒಳ್ಳೊಳ್ಳೆ ಸಾಹಿತ್ಯ ರಚಿಸಲು, ವಚನಗಳನ್ನು ಬರೆಯಲು, ದೀಕ್ಷೆ ಕೊಟ್ಟು ಆಶೀರ್ವದಿಸಲು, ಹೀಗೆ ಪುಣ್ಯದ ಒಳಿತಾಗುವ ಕಾರ್ಯಗಳನ್ನು ಕೈಗಳ್ಳುವುದೇ ಕೈಗಳಿಗೆ ಪ್ರಸಾದ ಭೋಗ.

ಪಾದ:- ಶರಣಜನ ಹೃದಯ ಕಮಲದೊಳು ಪರಿಶೋಭಿಸುತ್ತಿಹುದು ನಿನ್ನಪಾದ ಅಂತಾ ದೇವನನ್ನು ಕುರಿತು ಪಾದದ ಮಹಿಮೆಯನ್ನು ಕೊಂಡಾಡಿದ್ದಾರೆ. ಪದದಲ್ಲಿದೆ ಅದ್ಭುತ ಶಕ್ತಿ. ಎಲ್ಲರೂ ನಮಿಸುವುದು ಬಾಗುವುದು ಪಾದಕ್ಕೆ ಮಾತ್ರ. ಲಿಂಗದೇವನ ಶರಣರ ಪಾದವೇ ಪರುಷ, ತಪಸ್ಸು ಮಾಡಿದ ಶಕ್ತಿ ಎಲ್ಲಾ ಪಾದದಲ್ಲಿ ಶೇಖರಣೆ ಆಗಿರುತ್ತದೆ. ಒಳ್ಳೊಳ್ಳೆ ಪವಿತ್ರವಾದ ಸ್ಥಳಕ್ಕೆ ಹೋಗುವುದು ಯೋಗಾಸನಕ್ಕೆ ಯಾವಾಗಲು ಪಾದಗಳನ್ನು ಬೆಚ್ಚಗೆ ಇಟ್ಟುಕೊಳ್ಳಲಿಕ್ಕೆ, ಧರ್ಮ ಪ್ರಚಾರ ಮಾಡಲಿಕ್ಕೆ ಪಾದಯಾತ್ರೆಗಾಗಿ 30 ವರ್ಷಗಳ ವರೆಗೆ ಕಲಬುರಗಿ ಮತ್ತು ಬೀದರ ಜಿಲ್ಲೆಗಳಲ್ಲಿ ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಪಾದಯಾತ್ರೆಯ ಮುಖಾಂತರ, ಗುರು ಬಸವಣ್ಣನವರು ದಯಪಾಲಿಸಿದ ಲಿಂಗಾಯತ ಧರ್ಮ ವಚನ ಶಾಸ್ತ್ರ ಧರ್ಮ ಶರಣಧರ್ಮ ಬಸವಧರ್ಮವನ್ನು ಸತತವಾಗಿ ಧರ್ಮ ಪ್ರಚಾರ ಮಾಡಿದ್ದರಿಂದ ನಮಗೆಲ್ಲ ಅದರ ಮರ್ಮ ಸಂಪೂರ್ಣವಾಗಿ ವಿದಿತವಾಗಿ, ನಾವು ಯಾರು ಬೇಕಾದರೂ ಮುಂದೆ ಸಮರ್ಥಿಸಿಕೊಳ್ಳುವಂತಾಗಿದೆ ಈ ರೀತಿಯಾಗಿ ಪಾದಗಳನ್ನು ಸದ್ಬಳಕೆ ಮಾಡಿಕೊಳ್ಳುವುದೇ ಪಾದದ ಪ್ರಸಾದ ಭೋಗ.

ಗುದ:- ಆಧಾರ ಸ್ಥಾನದಿಂದ ಇದು ಬಹಳ ಮಹತ್ವದ ಪಾತ್ರವಹಿಸುವುದು. ಕುಂಡಲಿನಿ ಸರ್ಪವು ಅಧೋಮುಖವಾಗಿ ಮಡಗಿಕೊಂಡಿರುವುದು. ಅದನ್ನು ತನ್ನೆಲ್ಲ ಪ್ರಾಣಶಕ್ತಿಯನ್ನು ಲಿಂಗ ಪ್ರಾಣವನ್ನಾಗಿ ಪರಿವರ್ತಿಸಿ ಊರ್ಧ್ವದತ್ತ ಮುಖ ಮಾಡಿ ನಿರಂತರ ಸಾಧನೆಯ ಪ್ರಖರತೆಯಿಂದ ಒಂದೊಂದಾಗಿ ಚಕ್ರ ಭೇದವನ್ನು ಮಾಡುತ್ತಾ ಸಹಸ್ರಾರ ಚಕ್ರದವರೆಗೆ ಸುಷುಮ್ನ ನಾಡಿಯಗುಂಟ ಹೋಗಿ ತಲುಪಿದಾಗ ಆನಂದವೋ ಮಹದಾನಂದಮಯವಾಗಿ ಮಾರ್ಪಡುವುದು. ಇದು ಗುದ ಇಂದ್ರಿಯದ ಪ್ರಸಾದ ಭೋಗ.

ಗುಹ್ಯ:- ಇದರ ಸದ್ವಿನಿಯೋಗದಿಂದ ಸ್ತ್ರೀ ಪುರುಷರು ಹಾಗೂ ವಿರಕ್ತರು ನಿಗ್ರಹಿಸಿದರೆ, ಸದ್ಬಳಕೆಯಿಂದ ಉತ್ತಮ ಸಂತಾನ ಹಾಗೂ ಯೋಗಿಕ ಮಾರ್ಗವನ್ನು ಅನುಸರಿಸಿ ಸಾರ್ಥಕ ಜೀವನ ನಡೆಸಬಹುದು.

ಒಂದು ಕಡೆ "ಮೂತ್ರವು ಬಿಂದುವು ಒಂದು ನಾಳದಲ್ಲಿ ಬರ್ಕು ।
ಒಂದ ಬಿಟ್ಟು ಇಂದು ತಡೆದರೆ ಪರಬ್ರಹ್ಮನು ಒಂದು ಅಕ್ಕು । ಸರ್ವಜ್ಞ, ಎಂದು ಗುಹ್ಯದ ಮಾಹಿತಿಯನ್ನು ವಿವರಿಸಿದ್ದಾರೆ. "ಕಾಮವನ್ನು ಹತ್ತಿಕ್ಕಬಾರದು ಅದನ್ನು ಸದ್ಬಳಕೆ ಮತ್ತು ಉದಾತ್ತೀಕರಣ ಮಾಡಲು ಸೂಚಿಸುತ್ತಾರೆ ಜ್ಞಾನಿಗಳು. ಈ ಕ್ರಮವು ಗುಹ್ಯ ಇಂದ್ರಿಯದ ಪ್ರಸಾದ ಭೋಗ.

ಇನ್ನು ಕಣ್ಣು, ಕಿವಿ, ನಾಲಿಗೆ, ಚರ್ಮ ಘ್ರಾಣೇಂದ್ರಿಯಗಳ ಬಗ್ಗೆ ವಿವೇಚಿಸೋಣ. ಮುತ್ತು ಬೇರೆ ಮುತ್ತಿನ ಹಾರ ಬೇರೆ. ಒಂದೇ ಮುತ್ತನ್ನು ಹಾಕಿಕೊಂಡ್ರೆ ಚಂದಾಗಿ ಕಾಣಿಸುವುದಿಲ್ಲ. ಹಾರ ಹಾಕಿಕೊಂಡಾಗ ತುಂಬಾ ಚನ್ನಾಗಿ ಕಾಣಿಸುವುದು. ಮಾತು ಮಾತಾಗಿರಬಾರದು ಮಾತು ನುಡಿಯಾಗಿ ಅರ್ಥಗರ್ಭಿತವಾಗಿರಬೇಕು. ಸಾಹಿತ್ಯ ದೃಷ್ಟಿಯಿಂದಲೂ, ಹೃದಯವಂತಿಕೆಯಿಂದ ಕೂಡಿ, ರಸಿಕತೆಯಿಂದ ನಗೆಯನ್ನು ತರಿಸುವ ಮುತ್ತಿನ ಹಾರದ ಹಾಗಿರಬೇಕು. ಮಾಣಿಕ್ಯವನ್ನು ಒಂದು ಸ್ಥಾನದಲ್ಲಿ (ಕತ್ತಲೆಯಲ್ಲಿ) ಇಟ್ಟಾಗ ಸುತ್ತಲೂ ಬೆಳಕನ್ನು ಪ್ರಕಾಶವನ್ನು ಹೇಗೆ ಬೀರುತ್ತದೆಯೋ ಅದೇ ರೀತಿ, ನಮ್ಮಲ್ಲಿರುವ ಜ್ಞಾನವನ್ನು ಪ್ರಕಟ ಮಾಡಬೇಕಾದರೆ ನುಡಿ ಅವಶ್ಯವಾಗಿರಬೇಕು. ಸಂಶಯವನ್ನು, ಅಜ್ಞಾನವನ್ನು ತೊಡೆದು ಹಾಕಲು ಮಾಣಿಕ್ಯದಂತಹ ನುಡಿ ದೀಪ್ತಿಯಂತಿರಬೇಕು. ಸ್ಪಟಿಕದ ಸಲಾಕೆ ಯಾವ ರೀತಿಯಾಗಿ ಒಳಗೆ ಹೊರಗೆ ಸ್ವಚ್ಛವಾಗಿರುತ್ತದೆಯೋ ಅದೇ ರೀತಿ ನಮ್ಮ ನುಡಿಗಳೂ ಸಹ ಅಂತರಂಗದಲ್ಲಿದ್ದುದ್ದು ಹೊರಗೆ ನುಡಿಯಿಂದ ಸುಸ್ಪಷ್ಟವಾಗಿರಬೇಕು. ನಿಷ್ಕಪಟದಿಂದ ಕೂಡಿರಬೇಕು.

"ಕೆರೆಹಳ್ಳಬಾವಿಗಳು ಮೈದೆಗೆದರೆ ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು, ವಾರಧಿ ಮೈದೆಗೆದರೆ ಮುತ್ತು ರತ್ನಂಗಳ ಕಾಣಬಹುದು, ನಮ್ಮ ಲಿಂಗದೇವನ ಶರಣರು ಮನದೆರೆದು ಮಾತನಾಡಿದರೆ, ಲಿಂಗವೇ ಕಾಣಬುಹುದು" ಎಂದು ಧರ್ಮಪಿತರು ಉಪದೇಶಿಸಿರುವಂತೆ ನುಡಿದರೆ ಆ ಪರಮಾತ್ಮನು-ಲಿಂಗದೇವನು-ಅವನ ಸ್ವರೂಪಗಳಾದ ಶರಣರು ಮಹಾತ್ಮರು.

ಸರಿ ಇದೆ ಸರಿ ಇದೆ, ಯೋಗ್ಯವಾಗಿದೆ, ಯೋಗ್ಯವಾಗಿದೆ ಸಮಂಜಸವಾಗಿದೆ ಅಂತಾ ಹೃದಯ ತುಂಬಿ ಹಾರೈಸಬೇಕು. ಇನ್ನು ನಾವು ನುಡಿದಂತೆ ಅದನ್ನು ಅನುಷ್ಠಾನಕ್ಕೆ ತಾರದೇ ಇದ್ದರೆ, ಕೃತಿಯಲ್ಲಿ ತೊಡಗದೇ ಇದ್ದರೆ ಲಿಂಗದೇವನು ಹೇಗೆ ಪ್ರಸನ್ನ ವಾಗುವನು? ಎಂದು ಕೇಳುತ್ತಿದ್ದಾರೆ. ಮೌನಕ್ಕಿಂತಲೂ ಮಾತಿನ ಜ್ಯೋತಿರ್ಲಿಂಗ ಶ್ರೇಷ್ಠ (ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವನೋಡಾ, ತಾಳೋಷ್ಟ ಸಂಪುಟವೆಂಬುದು ನಾದಬಿಂದು ಕಳಾತೀತ, ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲಾ ಕೇಳಾ ಮರುಳೆ? ಅಂತಾ ಮುಕ್ತಾಯಕ್ಕನಿಗೆ ಉಪದೇಶ ಮಾಡುವಾಗ ಪ್ರಶ್ನೆಗೆ ಉತ್ತರಿಸಿದ್ದು ಈ ರೀತಿ ವಾಕ್‌ನಲ್ಲಿ ಪದಾರ್ಥ ತ್ಯಾಗ.

ಪಾಣಿ: ಇನ್ನು ಕೈಗಳು. ದೇವರು ಒಂದೇ ಬಾಯಿ, ಒಂದೇ ಹೊಟ್ಟೆಕೊಟ್ಟು ಹತ್ತು ಬೆರಳುಳ್ಳ ಎರಡು ಕೈಗಳನ್ನು ಕೊಟ್ಟಿದ್ದಾನೆ. ಒಂದು ಕೈ ತನಗಾಗಿ ಇನ್ನೊಂದು ಕೈ ಸಮಾಜಕ್ಕಾಗಿ. ಎಡಗೈ ಕನಿಷ್ಠ, ಬಲಗೈ ಶ್ರೇಷ್ಠ ಅಂತಾ ಪಂಚಾಂಗ ಭವಿಷ್ಯಕಾರರು, ಶಾಸ್ತ್ರಿಗಳು ಕೆಲವು ಶಕುನ-ಅಪಶಕುನ ವಾದಿಗಳು ಹೇಳುತ್ತಾರೆ. ಆದರೆ ಶರಣರು ಇದೇ ಶರೀರವನ್ನೇ ಪ್ರಸಾದ ಕಾಯ ಅಂತಾ ನುಡಿಯುತ್ತಾರೆ. ಬೆಳಿಗ್ಗೆ ಎದ್ದ ತಕ್ಷಣವೇ ಸ್ವಚ್ಛ ಮಾಡುವುದೇ ಎಡಗೈ. ಇದಕ್ಕೆ ಕಲಂಕ ಬರಬಾರದೆಂದೇ ಧರ್ಮಪಿತ ಬಸವಣ್ಣನವರು ಇಷ್ಟಲಿಂಗವನ್ನು ಪೂಜಿಸಲು ಅನುಸಂದಾನ ಮಾಡಲು ತ್ರಾಟಕಯೋಗವನ್ನು ಆಚರಿಸಲು ಯೋಗಿಗಳಾಗಲಿಕ್ಕೆ ಲಿಂಗವ ಎಡಗೈ ಗದ್ದುಗೆಯನ್ನಾಗಿ ಮಾಡಿದ್ದಾರೆ. ಬಲಗೈ ಕಡಿಮೆನಾ ಕೈಮುಟ್ಟಿ ಅಷ್ಟವಿಧಾರ್ಚನೆ ಮಾಡಲಿಕ್ಕೆ, ಜಪ ಮಾಡಲಿಕ್ಕೆ, ಎಲ್ಲಾ ಶುದ್ಧೀಕರಣ ಮಾಡಲಿಕ್ಕೆ, ತೀರ್ಥಪ್ರಸಾದ ತೆಗೆದುಕೊಳ್ಳಲಿಕೆ, ದೀಕ್ಷೆ ಮಾಡಲಿಕ್ಕೆ, ಹಸ್ತ ಮಸ್ತಕ ಸಂಯೋಗದಿಂದ ಆಶೀರ್ವಾದ ಮಾಡಲಿಕ್ಕೆ ಸರ್ವರೀತಿಯಿಂದ ಸೇವೆ ಮಾಡಲಿಕ್ಕೆ, ಯೋಗಾಸನ, ಪ್ರಾಣಾಯಾಮ ಮಾಡಲಿಕ್ಕೆ, ಪ್ರಸಾದ ಸ್ವೀಕರಿಸಲು, ಅಡಿಗೆ ಮಾಡಲು, ವಿದ್ಯೆ ಸಂಪಾದನೆ ಮಾಡುವಾಗ ಬರೆಯಲು, ಓದಲು ಪಾಠ ಪ್ರವಚನ ಬರೆದು ಹೇಳಲು, ಪ್ರಯೋಗಗಳನ್ನು ಮಾಡಲು, ಇಂಜನೀಯರಿಂದ ಡಿಜೈನ ಮಾಡಲು , ವೈದ್ಯಕೀಯ ಕ್ಷೇತ್ರದವರಿಗೆ ಇಂಜೆಕ್ಷನ್ ಮಾಡಲಿಕ್ಕೆ, ಅಪರೇಷನ್ ಮಾಡಲು, ಗಾರೆ ಕೆಲಸ ಮಾಡುವವರಿಗೆ, ರೈಲು, ವಿಮಾನ, ಬಸ್, ಕಾರು ಗಾಡಿ, ದ್ವಿಚಕ್ರ ವಾಹನ, ಸೈಕಲ್, ಚಕ್ಕಡಿ (ಎತ್ತಿನಬಂಡಿ) ನಡೆಸಲು ಯಂತ್ರಗಳನ್ನು ಚಾಲನೆ ಮಾಡಲು ಏನು ಹೇಳಬೇಕು ಎಷ್ಟು ಕೆಲಸಗಳು ಈ ಕೈಗಳಿಂದ. ಇವೆಲ್ಲ ಒಳ್ಳೆಯ ಕಾರ್ಯಗಳನ್ನು ನೆರವೇರಿಸಲು ಉಪಯೋಗಿಸುವುದೇ ಪ್ರಸಾದ ಭೋಗಕ್ಕೆ ಸಂಬಂಧಿಸಿದುದು.

ಮುಂದುವರಿಯುವುದು...



ಚಿಂತನ ಮಂಥನ

ಮಾತಾಜಿ ಮತ್ತು ಬಸವ ವಚನ ದೀಪ್ತಿ

। ಪೂಜ್ಯಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿ

ಶರಣ ಸನ್ನಿಹಿತ ಐಕ್ಯವಹಲ್ಲಿ ಹರಿಬ್ರಹ್ಮಾದಿಗಳು
ಮೊದಲಾದ ।
ತೆತ್ತೀಸಾದಿ ದೇವರ್ಕಳು ಉಘೆ ಉಘೆ ಎನ್ನುತ್ತಿರಲು
ಐಕ್ಯ ಬಸವಣ್ಣಂಗೆ ಠಾವಾವುದಯ್ಯ ಎಂದಡೆ
ಅಂಗದ ಕಳೆಯಲ್ಲಿ ಬಲದಲ್ಲಿ ಬ್ರಹ್ಮನ ಸ್ಥಾನ,
ಎಡದಲ್ಲಿ ನಾರಾಯಣನ ಸ್ಥಾನ ಒಲ್ಲೆನಯ್ಯಾ !
ಕೊರಳು ಗರಳದ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ,
ನಾಸಿಕ ವಾಯುವಿನ ಸ್ಥಾನ, ಕಣ್ಗಳು ಅಗ್ನಿ ಸ್ಥಾನ,
ಜಡೆ ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ
ಹಿಂದು ಸೂರ್ಯನ ಸ್ಥಾನ,
ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನಂಗಳು,
ಗುಹ್ಯ ಕಾಮನ ಸ್ಥಾನ,
ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗ ಸ್ಥಾನ,
ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ,
ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ,
ಹೃದಯಕಮಲ ಮಧ್ಯದ ಅಂತರಾಳದ
ಏಕಪೀಠದ ಸಿಂಹಾಸನದ ತೆರಹು ಕೊಡು
ಕೂಡಲಸಂಗಮದೇವ. (ಬವದೀ840)

ಮೂಲ ಶೈವ ಬ್ರಾಹ್ಮಣರ ಅಗ್ರಹಾರದಲ್ಲಿ ಉದಿಸಿದ ಗುರುಬಸವಣ್ಣನವರಿಗೆ ಶೈವ ಧರ್ಮದ ಪರಮೋನ್ನತ ಗುರು ಹರನ ಬಗ್ಗೆ ತುಂಬಿದ್ದ ಅಪಾರವಾದ, ಪರಮೋನ್ನತವಾದ, ನಿರ್ಮಲವಾದ ಭಕ್ತಿ ಅತ್ಯಂತ ಸಹಜವಾದುದೇ ಆಗಿದೆ. ಶೈಶವಾವಸ್ಥೆಯಿಂದ ತಾರುಣ್ಯಾವಸ್ಥೆ, ಪ್ರೌಢಾವಸ್ಥೆಯವರೆಗೂ ಮತ್ತು ನವಧರ್ಮ ದ್ರಷ್ಟಾರರಾಗುವವರೆಗೂ ಬಸವಣ್ಣನವರು ನಿಸ್ಸಂಶಯವಾಗಿಯೂ, ಪಾಶುಪತ ಶೈವಧರ್ಮ ಸಂಪ್ರದಾಯ ಬದ್ಧರೇ ಆಗಿದ್ದರು. ಇವರಂತೆಯೇ ಮಧುಕೇಶ್ವರ ದೇವಾಲಯದಲ್ಲಿ ಮದ್ದಳೆಯ ಬಾರಿಸಿ, ಮಾಯೆಯಿಂದ ಮಾರುಗೊಂಡ ಅಲ್ಲಮಪ್ರಭುದೇವರು(ನಾಥ ಪರಂಪರೆ) ಮತ್ತು ಯಜ್ಞ-ಯಾಗ, ಹವನ-ಹೋಮಗಳನ್ನು ಮಾಡಿ ಕಲ್ಲು ಕಲ್ಲಿಗೆ ಲಿಂಗವ ಕೆತ್ತಿಸಿ, ಗುಡಿ-ಗುಂಡಾರ, ತೀರ್ಥ-ಕುಂಡ-ಕೆರೆಗಳನ್ನು ನಿರ್ಮಿಸಿದ ಸಿದ್ಧರಾಮೇಶ್ವರರು, ಬಾಲ್ಯದಲ್ಲಿಯೇ ಶಿವನ ನಂಬಿ, ಶಿವನನ್ನೇ ಪತಿಯೆಂದು ಆರಾಧಿಸಿದ ಅಕ್ಕಮಹಾದೇವಿಯವರು, ಶೈವ ಧರ್ಮ ಸಂಪ್ರದಾಯ ಸಂಸ್ಕೃತಿಯಲ್ಲೇ ಬೆಳೆದವರು. ನಂತರದಲ್ಲಿ ಬೆಳೆದು ದೊಡ್ಡವರಾಗಿ ಬೌದ್ಧಿಕ ವಿಕಸನಗೊಂಡಂತೆಲ್ಲಾ ಅರಿವು ಜಾಗೃತವಾಗಿ ವೈಚಾರಿಕ, ಬೌದ್ಧಿಕ, ಜ್ಞಾನಾತ್ಮಕ, ಅನುಭಾವಿಕ ಪ್ರೌಢತೆಯನ್ನು ಹೊಂದಿ ಸಾಧಿಸಿ, ತಾವು ಹಿಡಿದ ಜೀವನ(ಶೈವ) ಪಥದಲ್ಲಿನ ಕುಂದು-ಕೊರತೆ, ಲೋಪ-ದೋಷಗಳ ವ್ಯಾಪಕತೆಯ ಅರಿವಾಗಿ, ನೂತನವಾದ ಸತ್ಯ, ನಿತ್ಯ, ನಿಜಾಚಾರದ, ಅನುಭವದ ನೆಲೆಗೆ ಪಲ್ಲಟಗೊಂಡರು. ಮೇಲ್ಕಾಣಿಸಿದ ವಚನದಲ್ಲಿ ಗುರು ಬಸವಣ್ಣನವರು ಪೌರಾಣಿಕರಿಸಲ್ಪಟ್ಟ ಶಿವನ(ಹರನ) ಅಂಗದ ಕಳೆಯಲ್ಲಿ ಯಾವ ಸ್ಥಾನದಲ್ಲಿ ಯಾರು ಯಾರು ಐಕ್ಯರಾಗಿ ಇದ್ದಾರೆ, ನಾನು ಎಲ್ಲಿ ಐಕ್ಯವಾಗಬೇಕು? ಎಂಬುದನ್ನು ಭಾವಿಸಿಕೊಂಡು ಶಿವ(ಹರ)ನಲ್ಲಿ ಬೇಡಿಕೊಂಡಿರುವುದನ್ನು ಕಾಣಬಹುದು. ಕ್ರಿ.ಶ. 1996ನೇ ಇಸವಿಯಲ್ಲಿ ಪರಮ




ಪೂಜ್ಯ ಮಾತಾಜಿಯವರು ಬರೆದ ಗುರು ಬಸವಣ್ಣನವರ ಸಮಗ್ರ ವಚನಗಳುಳ್ಳ ಬಸವ ವಚನ ದೀಪ್ತಿ ಗ್ರಂಥವು ಬಸವ ಭಕ್ತರಲ್ಲಿ ಬೌದ್ಧಿಕ, ಭಾಕ್ತಿಕ, ಭಾವನಾತ್ಮಕ ವಿಪ್ಲವವನ್ನೇ ಸೃಷ್ಟಿಸಿತು. ಕಾರಣ ಗುರುಬಸವಣ್ಣನವರ ಜೀವನಾವಲೋಕನಗೈದು ವಿಮರ್ಶಿಸಿ ನಿಶ್ಚಿತವಾಗಿ, ನಿಖರವಾಗಿ ಅವರ ಜೀವನ ಘಟ್ಟಗಳನ್ನು ಗುರುತಿಸಿ, ಸಾಕಷ್ಟು ಚಿಂತನಾನುಭವ ಮಾಡಿ ಬರೆಯಲ್ಪಟ್ಟ ಮೊಟ್ಟಮೊದಲ ಸಂಶೋಧನಾತ್ಮಕ ಗ್ರಂಥ ಅದಾಗಿತ್ತು. ಇದಕ್ಕೂ ಮೊದಲು ಗುರು ಬಸವಣ್ಣನವರು ಹೀಗೇ ಇದ್ದರು ಎಂದು ನಂಬಿಕೊಂಡು, ನುಡಿದು ತಮಗೆ ತಿಳಿದಂತೆ(ಅವರು ಇದ್ದಂತಲ್ಲಾ) ಪ್ರತಿಪಾದಿಸಿಕೊಂಡು ಬಂದಿದ್ದ ಬಹುಸಂಖ್ಯಾತ ಬುದ್ಧಿಜೀವಿಗಳು, ಮಠಾದೀಶರು, ಬಸವಾಭಿಮಾನಿಗಳು ಮತ್ತು ಬಸವ ಭಕ್ತರ ನಂಬಿಕೆ ವಿಶ್ವಾಸದ ತಳಹದಿಯನ್ನೇ 'ಬಸವ ವಚನ ದೀಪ್ತಿ' ಬಲವಾಗಿ ಅಲುಗಾಡಿಸಿ ಬಿಟ್ಟಿತ್ತು. ಯಾರೂ ಊಹಿಸಿರದ, ಭಾವಿಸಿರದ ಚಿಂತನಾವಲೋಕನಗೈಯ್ಯದ ರೀತಿಯಲ್ಲಿ ಬಸವಣ್ಣನವರ ವಚನಗಳನ್ನು ಕ್ರಮಬದ್ಧಗೊಳಿಸಿ, ಪ್ರಭಲವಾದ ಪುರಾವೆ, ವ್ಯಾಖ್ಯಾನ, ಉದ್ಧರಣ ಸಮರ್ಥನೆಗಳನ್ನು ನೀಡಿ, ಎಲ್ಲಿ ಯಾವ ಬದಲಾವಣೆಯ ಸೂಕ್ತ ಅಗತ್ಯವಿತ್ತೋ ಅಲ್ಲಿ ಅದನ್ನು ನಿರ್ಭಿಡೆಯಿಂದ ಬದಲಾಯಿಸಿ, ನವೀಕರಿಸಲಾಗಿತ್ತು. ಗುರು ಬಸವಣ್ಣನವರ ಬಗ್ಗೆ ಮೊದಲು ಸಂಪ್ರದಾಯಿಕವಾಗಿ ತಿಳಿದಿದ್ದಕ್ಕೂ 'ಬಸವ ವಚನ ದೀಪ್ತಿ' ಗ್ರಂಥದಲ್ಲಿ ಬರೆದಿರುವುದಕ್ಕೂ ಉಪಮಿಸಲಾಗದ ಅಘಾದವಾದ ಬದಲಾವಣೆ ಹೊಸತನದ ಅನಾವರಣವಾಗಿತ್ತು. ಇದರಿಂದಾಗಿ ಸಂಪ್ರದಾಯಿಕ ತಿಳುವಳಿಕೆಯುಳ್ಳ ಬಹುತೇಕ ಎಲ್ಲ ವರ್ಗದ ಜನರು ಹೊಸತನದ ಬದಲಾವಣೆಯನ್ನು ಪ್ರತಿಗಾಮಿತನವೆಂದೇ ತಪ್ಪಾಗಿ ಗ್ರಹಿಸಿ, ಪ್ರತಿಭಟಿಸಿ ಲೇಖಕರನ್ನು ಬೌದ್ಧಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ ಟೀಕೆಗೊಳ ಪಡಿಸಿದರು. ಇಂತಹ ಸಂದರ್ಭಗಳಲ್ಲೆಲ್ಲಾ ಮಹಾತ್ಮ, ಸಂತ, ದಾರ್ಶನಿಕ ನಿಲುವಿನ ಮಾತಾಜಿಯವರು ವಿಚಲಿತಗೊಳ್ಳದೇ, ದಿಟ್ಟತನದಿಂದ ಸಮಸ್ಯೆಗಳನ್ನು ಎದುರಿಸಿ, ಸಮಾಜದ ಸಾಂಪ್ರದಾಯಿಕ ತಿಳುವಳಿಕೆಯ ನಿಲುವನ್ನೇ ಬದಲಾಯಿಸಿದರು. ಇಂತಹ ಶ್ರೇಷ್ಠ ಸಂಶೋಧನೆಯಿಂದು ನವನವೀನ ಹೊಸತನದ ಅರಿವು, ಅನುಭಾವ, ಜ್ಞಾನ ಚಿಂತನೆಗಳಿಗೆ ತೆರೆದುಕೊಳ್ಳುತ್ತಿದೆ. ಬಸವಣ್ಣನವರು ಶೈಶವಾವಸ್ಥೆ ಅಥವಾ ಸಾಧಕಾವಸ್ಥೆಯ ಭಾವನಾತ್ಮಕ ನಿಲುವಿನಲ್ಲಿ ಬಯಸಿದ ಐಕ್ಯ ಮುಕ್ತಿಗೂ ಪ್ರೌಢ ದಾರ್ಶನಿಕ ಜ್ಞಾನಾನುಭಾವ ಪರಿಪೂರ್ಣ ನಿಲುವಿನ ಮಹಾಗುರು ಮಹಾಮಾನವರಾದಾಗ ಬಯಸಿದ ಆತ್ಯಂತಿಕ ನಿಲುವಿನ ಮುಕ್ತಿಗೂ ಕಲ್ಪನಾತೀತ ವ್ಯತ್ಯಾಸ ಕಾಣುತ್ತೇವೆ. ಸಾಧಕಾವಸ್ಥೆಯಲ್ಲಿ ಪೌರಾಣಿಕ ಶಿವನ ಹೃದಯ ಸಿಂಹಾಸನದ ಅಂತರಾಳದ ಏಕಪೀಠವನ್ನು ಐಕ್ಯಸ್ಥಾನವಾಗಿ ಬೇಡಿದ ಬಸವಣ್ಣನವರು ಪರಿಪೂರ್ಣತೆಯನ್ನು ಸಾಧಿಸಿದ ನಂತರ ಆತ್ಯಂತಿಕ ನಿಲುವು ಕರಿಗೊಂಡ ನಂತರ ಹೀಗೆ ಹೇಳುತ್ತಾರೆ.

"ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು,
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಿಯಾಯಿತ್ತು,

ಪುಟ 26ರಲ್ಲಿ ಮುಂದುವರಿಯುವುದು







ಕಲ್ಯಾಣ ಕಿರಣ
ಸಿರಿ ಕ್ಷಣಗಳು







ಕಲ್ಯಾಣ ಕಿರಣ
ಸಿರಿ ಕ್ಷಣಗಳು

ನಂಟು ಭಕ್ತಿ



ವಚನವಾಣಿ

ಮಾತೆ ಕಸ್ತೂರಿದೇವಿ

ಒಡೆಯರು ಬಂದಡೆ ಗುಡಿ ತೋರಣವ ಕಟ್ಟಿ,
ನಂಟರು ಬಂದಡೆ ಸಮಯವಿಲ್ಲೆನ್ನಿ. ಅಂದೇಕೆ ಬಾರರು
ನೀರಿಂಗೆ ನೇಣಿಂಗೆ ಹೊರಗಾದಂದು, ಸಮಯಾಚಾರಕ್ಕೆ ಒಳಗಾದಂದು.
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು.
ಬಳಿಕ ಬಂಧುಗಳುಂಟೆ, ಲಿಂಗದೇವಾ

– ಗುರು ಬಸವಣ್ಣನವರು.(ಬ.ವ.ದೀ–446)

ಅದೊಂದು ಎಲ್.ಕೆ.ಜಿ ತರಗತಿ. ಎಂದಿನಂತೆ ಪೂರ್ವಸಿದ್ಧತೆಯೊಂದಿಗೆ ಶಿಕ್ಷಕಿ ತರಗತಿ ಪ್ರವೇಶಿದಳು. ಅಂದು ಪುಟ್ಟ ಮಕ್ಕಳಿಗೆ ರಕ್ತಸಂಬಂಧಗಳನ್ನು ಕುರಿತ ಪಾಠ ಹೇಳಬೇಕಿತ್ತು. ಸರಿ. ಆಕೆ ಶುರು ಮಾಡಿದಳು.

ಮಕ್ಕಳೆ 'ನಿಮ್ಮ ಅಮ್ಮ ನಿಮ್ಮ ಅಪ್ಪನಿಗೆ ಏನಾಗಬೇಕು...?', ಮುಗ್ಧ ಮಕ್ಕಳಲ್ಲಿ ಕೆಲವು ಹೇಳಿದವು 'ಅಮ್ಮ' ಆಗಬೇಕು. ಮತ್ತೆ ಕೆಲವು ಹೇಳಿದವು 'ಮಮ್ಮಿ' ಆಗಬೇಕು. ಇನ್ನು ಅಪ್ಪನ ಸಂಬಂಧದ



ಬಗ್ಗೆ ಕೇಳಿದರೆ ಇಂಥದೆ ಉತ್ತರ ಸಿಗುತ್ತದೆ ಎಂದರಿತ ಶಿಕ್ಷಕಿ ಹೇಳಿದಳು 'ಮಕ್ಕಳೆ, ನಿಮ್ಮ ಅಮ್ಮ ನಿಮ್ಮ ಅಪ್ಪನಿಗೆ ಹೆಂಡತಿ ಆಗಬೇಕು. ನಿಮಗೆ ಮಾತ್ರ ಅಮ್ಮ ಆಗಬೇಕು, ತಿಳಿಯಿತೆ' ಎಂದು ಅಪ್ಪ–ಅಮ್ಮ–ಮಕ್ಕಳ ಸಂಬಂಧವನ್ನು ವ್ಯಾಖ್ಯಾನಿಸಿದಳು.ಆದರೆ ಶರಣರೆ, ಮಕ್ಕಳು ಮಾತ್ರ ಶಿಕ್ಷಕಿಯನ್ನು ಅಷ್ಟಕ್ಕೆ ಬಿಡಲಿಲ್ಲ. ಅವು ಕುತೂಹಲದಿಂದ ಪ್ರಶ್ನಿಸಿದ್ದು ಹೀಗೆ....'ಮಿಸ್, ಹೆಂಡತಿ ಅಂದರೇನು?!' ಈ ಪ್ರಶ್ನೆಗೆ ಮಕ್ಕಳಿಗೆ ಅರ್ಥವಾಗುವಂತೆ ಉತ್ತರಿಸಲು ಪಾಪ!...ಆ ಶಿಕ್ಷಕಿ ಒದ್ದಾಡಿದ್ದಂತೂ ನಿಜ.

ಶರಣ ಬಂಧುಗಳೆ, ಈಗಂತೂ ಚಿಕ್ಕ ಮಕ್ಕಳ ಪಠ್ಯಪುಸ್ತಕದಲ್ಲಿ ಕುಟುಂಬದ ಪಾಠಗಳು ಇರುತ್ತವೆ. ಅಂದರೆ ಅಜ್ಜ ಅಜ್ಜಿಯಿಂದ ಹಿಡಿದು ಕುಟುಂಬದಲ್ಲಿರುವ ಎಲ್ಲರ ವಿವರ ಚಿತ್ರಸಹಿತ ಇರುತ್ತದೆ. ಇಂಥ ಪಾಠಗಳು ನಮಗಂತೂ ಇರಲಿಲ್ಲ. ಬಹುಶಃ ಅಗತ್ಯ ಇರಲಿಕ್ಕಿಲ್ಲ. ಕಾರಣ ಅಂದು ಅವಿಭಕ್ತ ಕುಟುಂಬದ ವಾತಾವರಣದಲ್ಲಿ ಸಂಬಂಧಗಳ ಪರಸ್ಪರ ಪ್ರೀತಿ,ವಿಶ್ವಾಸ, ಪ್ರೇಮ, ಕಾಳಜಿಗಳು ಬಾಲ್ಯದಲ್ಲಿ ಸ್ವಾಭಾವಿಕವಾಗಿ ಸಿಗುತಿತ್ತು. ಆದರೆ ಈಗ ಹಾಗಿಲ್ಲ. ವಿಭಕ್ತ ಕುಟುಂಬಗಳು ಹೆಚ್ಚಾಗಿ ಮಕ್ಕಳಲ್ಲಿ ಸಂಬಂಧಗಳ ಅಜ್ಞಾನವೂ ಹೆಚ್ಚಾಗುತ್ತಿದೆ. ಈ ಬಗ್ಗೆ ಅರಿವು ಮೂಡಿಸಲು ಶಿಕ್ಷಣ ಇಲಾಖೆ ಇಂಥ ಪಾಠಗಳನ್ನು ಸೇರಿಸಿದ್ದಾರೆ ಎನ್ನಬಹುದು.

ಆದರೂ ಕಾಲೇಜಿನಲ್ಲಿ ಓದುವಾಗ ಪ್ರೊ.ತಿ.ನಂ.ಶ್ರೀಕಂಠಯ್ಯನವರು ಬರೆದ 'ನಂಟರು' ಎಂಬ ಪ್ರಬಂಧ ಇತ್ತು. ಅದರಲ್ಲಿ ಲೇಖಕರು ನಂಟರ ಬಗ್ಗೆ ಬರೆಯುತ್ತಾ ಹೇಳುತ್ತಾರೆ 'ನಂಟರು ಬರುತ್ತಾರೆಂದರೆ ಅಸ್ತವ್ಯಸ್ತವಾಗಿದ್ದ ಮನೆಯೆಲ್ಲಾ ಗಡಿಬಿಡಿಯಲ್ಲಿ ಶುಚಿಯಾಗುತ್ತಿತ್ತು. ಹಳೆಚಾಪೆ ಬಚ್ಚಿಟ್ಟು ಹೊಸ ಚಾಪೆ ಹಾಕುತ್ತಿದ್ದೆವು. ಹಳೆ ಬಟ್ಟೆಗಳು ಮೂಲೆ ಸೇರುತ್ತಿದ್ದವು. ಹೊಸ ಬಟ್ಟೆಗಳು ಹೊರಬರುತ್ತಿದ್ದವು. ರುಚಿಶುಚಿಯಾದ ಅಡುಗೆ ತಯಾರಾಗುತ್ತಿತ್ತು. ಒಂದು ರೀತಿ ನಂಟರು ಬಂದು ಹೋಗುವವರೆಗೂ ಮನೆಯಲ್ಲಿ ಉಸಿರು ಕಟ್ಟುವ ವಾತಾವರಣ ವಿರುತ್ತಿತ್ತು. ಕಾರಣ ಅವರು ನಮ್ಮ ಸ್ಥಿತಿಗತಿಯ ಬಗ್ಗೆ ಬಂಧುಬಳಗದಲ್ಲಿ ಇಲ್ಲಸಲ್ಲದ್ದನ್ನು ಆಡಿಕೊಳ್ಳುತ್ತಾರೆಂಬ ಭಯದಿಂದ ಬಹಳ ಎಚ್ಚರಿಕೆಯಿಂದ ವ್ಯವಹರಿಸಬೇಕಾಗುತಿತ್ತು' ಎಂದು. ಇರಲಿ, ಇದೆಲ್ಲಾ ನಂಟರ ಬಗ್ಗೆ ಪೀಠಿಕೆಯಾಯಿತು. ಆದರೆ ಇಂಥ ನಂಟರ ಕುರಿತು ಬಸವಾದಿ ಪ್ರಮಥರು ಒತ್ತಟ್ಟಿಗಿರಲಿ ಬಹಳಷ್ಟು ಹೆಸರಾಂತ ಮಹನೀಯರಲ್ಲಿ ಸಹ ಸದಭಿಪ್ರಾಯವಿಲ್ಲವೆಂಬುದು ಅವರ ಜೀವನ ಚರಿತ್ರೆಯಿಂದ ತಿಳಿದುಬರುತ್ತದೆ. ಉದಾಹರಣೆಗೆ– ಮೈಸೂರಿನ ಭಾಗ್ಯಶಿಲ್ಪಿ ಎಂದೇ ಹೆಸರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯ ನವರು ತಮಗೆ ದಿವಾನ ಪದವಿ ಸ್ವೀಕರಿಸಲು ಆಹ್ವಾನ ಬಂದಾಗ ಮೊದಲು ಅವರು ನೇರವಾಗಿ ತಾಯಿಯ ಬಳಿ ಬಂದು 'ಅಮ್ಮಾ!... ನನಗೆ ದಿವಾನನಾಗುವ ದೊಡ್ಡ ಅವಕಾಶ ಒದಗುತ್ತಿದೆ. ನೀನು ಸಂಬಂಧಿಕರ ಕೆಲಸಗಳನ್ನು ಮಾಡಿಕೊಡಲು ನನಗೆ ಭಾವನಾತ್ಮಕ ಒತ್ತಡ ಹಾಕಿದರೆ ಅಧಿಕಾರ ಸ್ವೀಕರಿಸುವುದಿಲ್ಲ. ಹಾಗೆಂದು ಮಾತು ಕೊಟ್ಟರೆ ಮಾತ್ರ ನಾನು ದಿವಾನನಾಗುತ್ತೇನೆ' ಎಂದಾಗ ತಾಯಿ ಅನ್ಯಮಾರ್ಗವಿಲ್ಲದೆ ಮಗನ ಷರತ್ತಿಗೆ ಒಪ್ಪಿಗೆ ಕೊಟ್ಟರಂತೆ!

ಮತ್ತೊಂದು ಪ್ರಸಂಗ! ಉನ್ನತ ಅಧಿಕಾರದಲ್ಲಿದ್ದ ಮಂತ್ರಿಯೊಬ್ಬರು ತಮ್ಮ ಕಛೇರಿಯ ಮುಂಭಾಗದಲ್ಲಿ 'ರಕ್ತಸಂಬಂದಿಕರಿಗೆ ಪ್ರವೇಶವಿಲ್ಲ' ಎಂಬ ಬೋರ್ಡ್ ನೇತು ಹಾಕಿದ್ದರಂತೆ! ಇದರಿಂದ ರೋಷಗೊಂಡ ಸಂಬಂಧಿಕನೊಬ್ಬ ಮಂತ್ರಿಗಳು ಒಳಗಿದ್ದಾಗ ನುಗ್ಗಿ ಅವರ ಮೇಲೆ ಗುಂಡು ಹಾರಿಸಿದ್ದು ನಂತರ ಸಂಬಂಧಿಕನು ಬಂಧನಕ್ಕೆ ಒಳಗಾಗಿದ್ದು ಪತ್ರಿಕೆಗಳಲ್ಲಿ ಫೋಟೋ ಸಹಿತ ವರದಿಯಾಗಿತ್ತು. ಸುದೈವದಿಂದ ಮಂತ್ರಿಗಳು ಗುಂಡೇಟಿನಿಂದ ಚೇತರಿಸಿ ಕೊಂಡು ಕರ್ತವ್ಯಕ್ಕೆ ಹಾಜರಾದದ್ದು ಈಗ

ಇತಿಹಾಸ. ಈಗೀಗ ಎಲ್ಲೆಲ್ಲೂ ಕುಟುಂಬ ರಾಜಕಾರಣ ಬಹಳಷ್ಟು ಕೇಳಿ ಬರುತ್ತಿದೆ. ರಾಜಕಾರಣಿಗಳ ಸಂಬಂಧಿಕರು ಎಂದು ಹೇಳಿಕೊಂಡು ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುವ, ತಮ್ಮ ಬೇಳೆ ಬೇಯಿಸಿಕೊಳ್ಳುವ, ಸರಕಾರಿ ಸಿಬ್ಬಂದಿಯನ್ನು ಶೋಷಿಸುವ, ಸಾರ್ವಜನಿಕವಾಗಿ ತಮ್ಮ ಪ್ರತಿಷ್ಟೆ ಮೆರೆಯುವವರನ್ನು ನಿತ್ಯವೂ ಮಾದ್ಯಮಗಳಲ್ಲಿ ಕಾಣಬಹುದು. ಹೀಗೆ ಸಂಬಂಧಿಕರ ವಿಷಯಾನುಭವಗಳು ಭಯಂಕರವಾಗಿವೆ ಎನ್ನದೆ ವಿಧಿಯಿಲ್ಲ. ವಚನ ಸಾಹಿತ್ಯದಲ್ಲಿ ಸಹ ಇಂಥ ನಂಟರ ಒಡನಾಟಕ್ಕೆ, ಮಧ್ಯ ಪ್ರವೇಶಕ್ಕೆ ವಿರೋಧವಿದೆ. ಇಂಥ ಕಹಿ ಅನುಭವಕ್ಕೆ ಪುಷ್ಟಿ ಕೊಡುವಂತೆ ಗಾದೆ ಮಾತುಗಳು ಹುಟ್ಟಿಕೊಂಡಿವೆ.

ನೀರಿಗೆ ಹತ್ತಿರವಿದ್ದರೂ ನಂಟರಿಗೆ ದೂರವಿರಬೇಕು.

ತನ್ನವರು ತನಗೆ ಊನ; ಕುಂಟೆತ್ತು ಹೊಲಕ್ಕೆ ಊನ.

ವಿಷ್ಣುಪುರಾಣ ಮತ್ತು ಭಗವದ್ಗೀತೆಯಲ್ಲಿ ಆದ್ಯಾತ್ಮ ಸಾಧಕನ ಅರ್ಹತೆಗನುಗುಣವಾಗಿ ಭಕ್ತಿಯನ್ನು ಒಂಭತ್ತು(ನವ)ವಿಧವಾಗಿ ವಿಂಗಡಿಸಿದ್ದರೂ, ಇದರಲ್ಲಿ ನಂಟುಭಕ್ತಿಗೆ ಜಾಗವಿಲ್ಲ ಅಥವ ಸೇರಿಸಿಲ್ಲ ಎಂಬುದು ಗಮನಾರ್ಹ. ನವವಿಧ ಭಕ್ತಿಗಳು ಹೀಗಿವೆ-

1. ಶ್ರವಣ ಭಕ್ತಿ-ಇಷ್ಟದೇವತೆಯ ಅಥವ ಪರಮಾತ್ಮನ ಲೀಲೆ ಮತ್ತು ಸಂಬಂಧಿಸಿದ ಕಥೆಗಳನ್ನು ಕೇಳುವುದು.

2. ಕೀರ್ತನ- ಪರಮಾತ್ಮನನ್ನು ಕುರಿತು ಹಾಡುವುದು; ಕೊಂಡಾಡುವುದು.

3. ಸ್ಮರಣ- ಪರಮಾತ್ಮನ ನಾಮಸ್ಮರಣೆ ಮತ್ತು ನೆನಪಿನಲ್ಲಿ ತನ್ಮಯವಾಗುವುದು.

4. ಪಾದಸೇವನ- ಗುರುಹಿರಿಯರ ಪಾದಸೇವೆಯಲ್ಲಿ ಸಾರ್ಥಕತೆಯನ್ನು ಅನುಭವಿಸುವುದು.

5. ಅರ್ಚನ- ಅಷ್ಟವಿಧಾರ್ಚನೆ ಮತ್ತು ಷೋಡಶೋಪಚಾರದಿಂದ ಮನದಣಿಯೆ ಪೂಜಿಸುವುದು.

6. ವಂದನಾ- ಕೃತಜ್ಞತೆಯಿಂದ ನಮಸ್ಕರಿಸುವುದು; ಅಭಿನಂದಿಸುವುದು.

7. ದಾಸ್ಯ- ಸೇವಾ ಮನೋಭಾವದಿಂದ ಉಪಚರಿಸುವುದು.

8. ಸಖ್ಯ- ಸ್ನೇಹಭಾವದಿಂದ ಆರಾಧಿಸುವುದು.

9. ಆತ್ಮನಿವೇದನೆ- ಸಂಪೂರ್ಣ ಶರಣಾಗತಿಯಿಂದ ತನ್ನನ್ನು ತಾನು ಸಮರ್ಪಿಸುವುದು.

ಗುರು ಬಸವಣ್ಣನವರು ವಚನದಲ್ಲಿ ತಮ್ಮ ಪರಿವಾರದವರಿಗೆ ಆದೇಶಿಸುತ್ತಿದ್ದಾರೆ. ಒಡೆಯರು ಅಂದರೆ ಇಲ್ಲಿ ಧಾರ್ಮಿಕ ಮತ್ತು ರಾಜಕೀಯ ನೇತಾರರಾದ ಗುರು ಬಸವಣ್ಣನವರ ದರ್ಶನಕ್ಕಾಗಿ ಬರುವ ಅಸಂಖ್ಯ ಶರಣಬಂಧುಗಳು ಹಾಗೂ ತಮ್ಮ ಸಮಸ್ಯೆಯ ಪರಿಹಾರಕ್ಕಾಗಿ ಬರುವ ಪ್ರಜೆಗಳು. ಇಂಥವರು ಬಂದಾಗ ಮಾತ್ರ ಸ್ವಾಗತಿಸಿರಿ ಎಂದು ಹೇಳುವರು. ತಮ್ಮ ಸ್ವಾರ್ಥ ಸಾಧಿಸಲು ನಂಟರಿಷ್ಟರು ಬಂದಾಗ ಅವರನ್ನು ವಿಚಾರಿಸಿಕೊಳ್ಳಲು ನಮಗೆ ಸಮಯವಿಲ್ಲ ಎಂದು ಹೇಳಿ ಕಳಿಸುವಂತೆ ಆದೇಶಿಸಿದ್ದಾರೆ.

ಅಪ್ಪ ಬಸವಣ್ಣನವರು ಕೇಳುತ್ತಾರೆ **'ಅಂದೇಕೆ ಬಾರರು ನೀರಿಂಗೆ ನೇಣಿಂಗೆ ಹೊರಗಾದಂದು, ಸಮಯಾಚಾರಕ್ಕೆ ಒಳಗಾದಂದು'** ಎಂದು. ಅವರು ಬಾಲ್ಯದಲ್ಲಿ ಬಹುದೇವತೋಪಾಸನೆ, ಹೋಮಹವನ, ಉಪನಯನ ಮತ್ತು ಜನಿವಾರ ಧಾರಣೆ ಮುಂತಾದುವನ್ನು ವಿರೋಧಿಸಿದಾಗ ಬಂಧುಬಳಗದವರು ಬಾಲಕ ಬಸವರಸರಿಗೆ ಕುಡಿಯಲು ನೀರನ್ನು ಸಹ ಕೊಡದೆ ಸಾಮಾಜಿಕ ಬಹಿಷ್ಕಾರ ಹಾಕಿದರು. ಆಗ ಸತ್ಯಾನ್ವೇಷಣೆಗಾಗಿ ಮನೆ ತೊರೆದು ಕೂಡಲಸಂಗಮದ ಗುರುಕುಲ ಸೇರಿ ಗುರುಕಾರುಣ್ಯ ಪಡೆದು ತಮ್ಮ ಸಾಧನೆಯನ್ನು ಮುಂದುವರಿಸಿದರು. ಈಗ ಅಧಿಕಾರ ಸಿಕ್ಕ ಮೇಲೆ ಬಹಿಷ್ಕಾರ ಹಾಕಿದವರು ಸಂಬಂಧ ಹೇಳಿಕೊಂಡು ಬಂದು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಬಯಸಿದಾಗ ಈ ರೀತಿಯಾಗಿ ಭೋಧಿಸಿ, ಆಚರಿಸಿ ತಮ್ಮ ತತ್ವನಿಷ್ಠುರತೆಯನ್ನು ವಚನದಲ್ಲಿ ಬಿಂಬಿಸಿ

ತನ್ಮೂಲಕ ಸಮಾಜದ ಎತ್ತರದ ಜವಾಬ್ದಾರಿ ಸ್ಥಾನದಲ್ಲಿರುವವರಿಗೂ ಮಾದರಿಯಾಗಿದ್ದಾರೆ.

**ಅಣ್ಣ, ತಮ್ಮ, ಹೆತ್ತಯ್ಯ ಗೋತ್ರವಾದಡೇನು
ಲಿಂಗಸಾಹಿತ್ಯರಲ್ಲದವರ ಎನ್ನವರೆನ್ನೆನಯ್ಯಾ
ನಂಟುಭಕ್ತಿ ನಾಯಕನರಕ, ಲಿಂಗದೇವಾ.**

-ಬಸವಣ್ಣನವರು.(ಬ.ವ.ದೀ-711)

ಹಾಗಾದರೆ ನಮ್ಮವರು ಎಂದು ಯಾರನ್ನು ಪರಿಗಣಿಸಬೇಕು? ಎಂಬ ಜಿಜ್ಞಾಸೆ ಉದಯೋನ್ಮುಖ ಸಾಧಕರಲ್ಲಿ ಮೂಡುವುದು ಸಹಜ. ಈ ವಚನದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪಕರಾದ ಗುರು ಬಸವತಂದೆಯವರು ಮಾರ್ಗದರ್ಶನ ಮಾಡುತ್ತಿದ್ದಾರೆ. ಪೂರ್ವಾಶ್ರಮದಲ್ಲಿ ರಕ್ತಬಂಧುಗಳಾದ ಅಣ್ಣ, ತಮ್ಮ ಕೊನೆಗೆ ಜನ್ಮ ಕೊಟ್ಟ ತಂದೆಯಾಗಿರಬಹುದು ಅವರು ಗುರು ಮುಖೇನ ಇಷ್ಟಲಿಂಗದೀಕ್ಷೆ ಪಡೆದು ಧರ್ಮಬಂಧುಗಳಾಗಿ ಪರಿವರ್ತನೆ ಹೊಂದಿದ್ದರೆ ಮಾತ್ರ ಅವರೊಡನೆ ಬಂಧುತ್ವ ಮುಂದುವರಿಸಬಹುದು. ದೀಕ್ಷೆ ಪಡೆಯದಿದ್ದರೆ ಅವರಿಂದ ದೂರವಿರಬೇಕು. ದೀಕ್ಷಾಸಂಸ್ಕಾರ ಇಲ್ಲದವರ ಒಡನಾಟ ನರಕಕ್ಕೆ ಸಮಾನ ಎಂದು ಧರ್ಮಪಿತರು ಎಚ್ಚರಿಸುತ್ತಿದ್ದಾರೆ. ಅಷ್ಟೆ ಅಲ್ಲ, ಆದರ್ಶ ಸಾಧಕರು ಲಿಂಗದೀಕ್ಷೆ ಯಿಲ್ಲದ, ಶರಣಸಂಗದಲ್ಲಿ ಬೆರೆಯದ ಪೂರ್ವಾಶ್ರಮದವರೊಡನೆ ಒಡನಾಟ ಸಲ್ಲದು ಎಂದೆ ಬಸವಾದಿ ಪ್ರಮಥರು ನಿಷ್ಠುರವಾಗಿ ಅನೇಕ ವಚನಗಳಲ್ಲಿ ಹೀಗೆ ಉಲ್ಲೇಖವಾಗಿದೆ.

*** ಸುಣ್ಣದ, ತುಯ್ಯಲ ಬಣ್ಣವೊಂದೆ ಎಂದಡೆ ನಂಟುತನಕ್ಕೆ ಉಣಬಹುದೆ?- ಬಸವಣ್ಣ.**

ಸಂಸಾರಬಂಧುಗಳೆನ್ನವರೆಂದಡೆ ನಂಟುಭಕ್ತಿ ನಾಯಕನರಕ- ಬಸವಣ್ಣನವರು.

*** ನಂಟುತನದ ದಾಕ್ಷಿಣ್ಯಕ್ಕಾಗಲಿ,
ನೆಂಟರ ದಾಕ್ಷಿಣ್ಯಕ್ಕಾಗಲಿ ಅದಲ್ಲದೆ,
ಅವರುಗಳಲ್ಲಿ ಅನ್ನ ಪಾನವ ಕೊಂಡೆನಾದಡೆ,
ಹೊಲೆಗೇರಿಯ ಹಂದಿಯ ಮುಸುಡ
ಮೂಸಿ ನೋಡಿದಂತಾಯಿತ್ತು,**

- ಮಡಿವಾಳ ಮಾಚಿದೇವರು.

ಇಲ್ಲಿ ಎರಡು ರೀತಿಯ ದುರ್ಬಲ ಆಕರ್ಷಣೆಯನ್ನು ಮಡಿವಾಳ ಮಾಚಿದೇವರು ಗುರುತಿಸಿದ್ದಾರೆ. ನಂಟುತನದ ದಾಕ್ಷಿಣ್ಯ ಅಂದರೆ ಸಾಧಕನಲ್ಲಿಯೆ ಗೋಚರಿಸುವ ನಂಟಸ್ತನದ ಹಂಗಿಗೆ ಒಳಗಾಗಿ ಅಥವ ದಾಕ್ಷಿಣ್ಯ ಅಂದರೆ ಇಲ್ಲಿ ನೆಂಟರೆ ಒತ್ತಾಯ ಮಾಡಿದಾಗ, ಈ ಎರಡು ಸಂದರ್ಭಗಳಲ್ಲಿ ಸಾಧಕನು ಸೋಲಬಾರದು. ಸೋತು ನಂಟರಲ್ಲಿ ಅನ್ನಪಾನಾದಿಗಳನ್ನು ಕೊಂಡರೆ ಅವನು ಕನಿಷ್ಟನಾಗುವನು ಎಂದು ಜರಿದಿದ್ದಾರೆ.

**ಬಂಧುಗಳು ಆದವರು ಬಂದುಂಡು
ಹೋಗುವರ, ಬಂಧನವ ಕಳೆಯಲರಿಯರು।
ಗುರುವಿಗಿಂತ ಅಧಿಕ ಬಂಧುಗಳು ಉಂಟೆ
ಸರ್ವಜ್ಞ?**

ಸರ್ವಜ್ಞನು ಸಹ ನಂಟರ ಅಥವ ಬಂಧುಗಳ ಬಗ್ಗೆ ತಿರಸ್ಕಾರವನ್ನೆ ತಾಳಿರುವುದು ಕಂಡು ಬರುತ್ತದೆ. ನಾವು ಸುಖವಾಗಿದ್ದಾಗ ಮಾತ್ರ ಬಂದು ಉಂಡುತಿಂದು ನಲಿದು ಹೋಗುವ ಬಂಧುಗಳು ಕಷ್ಟದಲ್ಲಿದಾಗ ಹತ್ತಿರ ಸುಳಿಯುವುದಿಲ್ಲ. ಬಾಳಿನ ಕಗ್ಗತ್ತಲಲ್ಲಿ ದಾರಿ ತೋರಿ ಮಾರ್ಗದರ್ಶನ ಮಾಡುವ ಗುರುವಿಗಿಂತ ಹೆಚ್ಚಿನ ಬಂಧು ಈ ಜಗತ್ತಿನಲ್ಲಿ ಮತ್ತೊಬ್ಬರಿಲ್ಲ ಎಂದು ಸರ್ವಜ್ಞ ಗುರುವಿನ ಮಹತಿಯನ್ನು ದೃಢಪಡಿಸುತ್ತಾನೆ.

ನಂಟರು ಬಂಧುಗಳು ಎಂದೆಲ್ಲ ಕರೆಸಿಕೊಳ್ಳುವವರ ಬಗ್ಗೆ ಇಷ್ಟೆಲ್ಲಾ ತಿಳಿದ ಮೇಲೆ ಅವರ ಬಗ್ಗೆ ನಾವು ಎಚ್ಚೆತ್ತುಕೊಳ್ಳಬೇಕು ಎಂಬುದೇನೊ ನಿಜ; ಆದರೆ ಅವರಂತೆ ನಾವು ಸಹ ಬೇರೊಬ್ಬರಿಗೆ ನಂಟರಾಗುತ್ತಿರುವುದನ್ನು ತಪ್ಪಿಸಲು ಸಾಧ್ಯವಿಲ್ಲ ಅಲ್ಲವೆ?! ಆಗ ನಮ್ಮ ಪಾತ್ರ ಏನಿರಬೇಕು? ಗುರು ಬಸವಕೃಪೆಯಿಂದ ವಚನಸಂಸ್ಕಾರ ಪಡೆದ ನಮಗೆ ಲೌಕಿಕ ನಂಟರ ನಡೆನುಡಿಗಳು ಬರದಿರಲಿ ಎಂದು ಪ್ರಾರ್ಥಿಸೋಣ. ಬಸವ ಯೋಗಿ ಶ್ರೀ ಸಿದ್ಧರಾಮೇಶ್ವರರೊಂದಿಗೆ ನಾವು ಧ್ವನಿಗೂಡಿಸೋಣ.

**ಬಸವಣ್ಣನೇ ತಾಯಿ, ಬಸವಣ್ಣನೇ ತಂದೆ
ಬಸವಣ್ಣನೇ ಪರಮ ಬಂಧುವೆನಗೆ
ವಸುಧೀಶ ಕಪಿಲಸಿದ್ಧ ಮಲ್ಲಿನಾಥಯ್ಯ
ನಿಮ್ಮ ಹೆಸರಿಟ್ಟ ಗುರು ಬಸವಣ್ಣನಯ್ಯ**

- ಶ್ರೀ ಸಿದ್ಧರಾಮೇಶ್ವರರು.

ಆಚಾರ ಅರಿವು ಅನುಭಾವ



ಪೂಜ್ಯಶ್ರೀ
ಬಸವಪ್ರಭು ಸ್ವಾಮೀಜಿ.

ಕೆಚ್ಚೆದೆ ಯೋಧನ ಪತ್ನಿ ಮಹಾದೇವಿಯ ಶಪಥ

ದೇಶದ ಸೇವೆಗಾಗಿ ಸನ್ನದ್ಧನಾಗಿ ಪ್ರತಿಜ್ಞೆಗೈದ ಯೋಧ

ಎಂತಹದ್ದೆ ಕಷ್ಟ ಬಂದರೂ, ಅದೆಷ್ಟೇ ಅಡೆ ತಡೆಗಳು ಬಂದರೂ

ಹೆದರದೆ, ಬೇಸತ್ತದೆ, ತಾಳ್ಮೆ ಕಳೆದುಕೊಳ್ಳದೆ

"ಮಾಡು ಇಲ್ಲವೆ ಮಡಿ" ಎಂಬ ಉಕ್ತಿಯನ್ನು ತನ್ನ

ಹೃದಯ ಗರ್ಭದ ಗುಡಿಯಲ್ಲಿ ಭಾವದಿಂ ಬರೆದುಕೊಂಡು

ಕೆಚ್ಚೆದೆಯಿಂ ಹೋರಾಡುವ ನಿನ್ನಂತೆ

ಯಾರಿಹರು ಮಿಗಿಲವರು; ದೇಶಪ್ರೇಮಿಗಳು?

ಇರಲಾರರು ನಿನ್ನಂತೆ ಸೇವೆ ಗೈದವರು,

ಪ್ರಾಣದ ಹಂಗು ತೊರೆದು ದೇಶಕ್ಕಾಗಿ ಮಡಿದವರು.

ನಿನಗೆ ನೀನೆ ಸಾಟಿ ಯೋಧ ದೇಶಭಕ್ತರಿಗೆ ನೀ ಭಾವೋನ್ಮಾದನಾದೆ

ನಿನ್ನ ಬೆಳೆಸಿ ಭಾರತಾಂಬೆಗೆ ನೀಡಿದಂಥ ತಾಯಿ ಆದಳಲ್ಲ ಧನ್ಯಳು,

ನಿನ್ನ ಬಾಳಿನುಸಿರಾಗಿ ಬೆಳಕಾದ ನಿನ್ನ ಧರ್ಮಸತಿ ನಿಜಕ್ಕೂ ಪುಣ್ಯಳು.

ನಿನ್ನ ಸ್ಫೂರ್ತಿಗೆ ಕೀರ್ತಿಯಾದ ಭಾರತಾಂಬೆಗೆ ಶರಣು ಶರಣಾರ್ಥಿ ಯೋಧ, ಯೋಧ, ಯೋಧ ನಮ್ಮ ಹೃನ್ಮಂದಿರಗಳಲ್ಲಿ ಅಮರನಾದ ಭಾರತಾಂಬೆಯ ಸಚ್ಚಾರಿತ್ರದಲ್ಲಿ ಇತಿಹಾಸವಾದುದು ನಿಜ! ಹೃದಯ ಭಾರದಿಂದ ನಾನೇನು ಹೇಳಲು ಹೊರಟೆನೆಂಬುದು



ನಿಮಗೀಗಾಗಲೆ ಗೊತ್ತಾಯಿತಲ್ಲವೆ, ಗೊತ್ತಾಗಲೇಬೇಕು. ಈ ತಿಂಗಳ ಮೊದಲ ವಾರದಲ್ಲಿ ನಮ್ಮೆಲ್ಲರ ಚಿತ್ತವನ್ನು ಸೂರೆ ಮಾಡಿ ಸಿಯಾಚಿನ್ ಹಿಮಪರ್ವತ ಹತ್ತು ಜನ ಯೋಧರ ವೀರಮರಣವನ್ನು ಆರಿಸಿದ ಹೃದಯ ವಿದ್ರಾವಕ ಘಟನೆ.

ಅದು ಮದ್ರಾಸ್ ರೆಜಿಮೆಂಟಿಗೆ ಸೇರಿದ ಲಾನ್ಸ್‌ನಾಯಕ ಹನುಮಂತಪ್ಪ ಮತ್ತು ಅವರ ಒಂಬತ್ತು ಮಂದಿ ಸಹಯೋಧರು ಸಮುದ್ರ ಮಟ್ಟದಿಂದ 19,500 ಅಡಿ ಎತ್ತರದ ಸಿಯಾಚಿನ್ ಹಿಮಪರ್ವತದ ಮೇಲೆ ದೇಶಕಾಯುವ ಕಾಯಕದಲ್ಲಿ ತೊಡಗಿ ಹಿಮಪಾತದಿಂದ ನೀರ್ಗಲ್ಲು ಕುಸಿತ ಆವೃತವಾಗಿ ಕರ್ಮಾತೀತನಾದ ಲಿಂಗದೇವನಲ್ಲಿ ಲೀನವಾದ ವೀರಯೋಧನ ಕಥೆ. ಅದರಲ್ಲೂ ಮೃತ್ಯುಂಜಯನೆನಿಸಿ ಬಾರದ ಲೋಕದಲ್ಲಿ ಅಮರತ್ವ ಪಡೆದ ಕರ್ನಾಟಕದ ಕೆಚ್ಚೆದೆಯ ಗಂಡು ಮೆಟ್ಟಿನ ಧಾರವಾಡದ ಕುಂದುಗೋಳ ತಾಲೂಕಿನ ಬೇಟದೂರಿನ ವೀರಯೋಧ ಲಾನ್ಸನಾಯಕ ಹನುಮಂತಪ್ಪ ಕೊಪ್ಪದವರು. ಮತ್ತು ಸಾಕ್ಷಾತ್ ದೇವರೇ ದುಃಖವನ್ನು ಪಡೆದುಕೊಳ್ಳದ ಹಾಗೆ ತನ್ನ ಶಕ್ತಿಯನ್ನು ನೀಡಲಾರದೆ ಕಳೆದುಕೊಂಡನೇನೊ ಎಂಬಂತೆ ಅಪಾರ ದುಃಖಿತಪ್ತಳಾಗಿ ಕೊನೆಗೆ ಗಟ್ಟಿ ಧೈರ್ಯಮಾಡಿ ದೇಶಪ್ರೇಮಕ್ಕಾಗಿ ತನ್ನೊಂದು ಮಾತಿನ ಮೂಲಕ ಶಪಥ ಗೈದ ಅನನ್ಯ ದೇಶಪ್ರೇಮಿ ಮಹಾಸಾಧ್ವಿ ಮಹಾದೇವಿಯವರ ಬಗ್ಗೆ ನಾಲ್ಕು ಸಾಲನ್ನಾದರೂ ಬರೆದು ಕೃತಜ್ಞತೆ ಸಲ್ಲಿಸಿ ಕೃತಾರ್ಥನಾಗಬೇಕೆಂಬ ಬಯಕೆ ನನ್ನದು. ಹೌದು ಅಂದು ದೇಶ ಸೇವೆಯೆ ಈಶ ಸೇವೆ ಎಂದು ಅನ್ನದ ಪರಿವಿಲ್ಲದೆ ಸುಖನಿದ್ರೆಯ ಆನಂದವಿಲ್ಲದೆ, ನೆಮ್ಮದಿಯ ಸೂರಿನ ಹಂಗಿಲ್ಲದೆ, ಆಕಾಶವೇ ಚಪ್ಪರ, ಹಿಮಪರ್ವತವೆ ಹಾಸಿಗೆ, ಮಂಜಿನ ಮುಸುಕೆ ಹೊದಿಕೆಯನ್ನಾಗಿ ಮಾಡಿಕೊಂಡು 'ಬಿಟ್ಟರೆ ಬಿಡದೀ ಮಾಯೆ' ಎಂಬ ಸಂತರ ಮಾತಿನಂತೆ ಪಾಕಿಸ್ತಾನದ ದುಷ್ಟ ಭ್ರಷ್ಟ, ಉಗ್ರ ಪ್ರವೃತ್ತಿಗೆ ಸವಾಲಾಗಿ ಅವರನ್ನು ಮಟ್ಟ ಹಾಕುವಲ್ಲಿ ಛಲದಂಕ ಮಲ್ಲರಾಗಿ, ಹಗಲೆನ್ನದೆ ಇರುಳೆನ್ನದೆ ಹೋರಾಡಲು ಸಿದ್ಧರಾಗಿ, ಬದ್ಧರಾಗಿ, ಪ್ರಬುದ್ಧರಾಗಿ, ಮೈಯೆಲ್ಲ ಕಣ್ಣಾಗಿ ಕಾಶ್ಮೀರದ ಕಣಿವೆಯಲ್ಲಿ, ಕಾರ್ಗಿಲ್‌ನ ಗಿರಿಕಂದರಗಳಲ್ಲಿ, ಸಿಯಾಚಿನ ಹಿಮರಾಶಿಯಲ್ಲಿ ಗಸ್ತು ಕಾಯುವ ಯೋಧರು ಭುಜದ ಮೇಲೆ ಬಂದೂಕು ಹೊತ್ತು, ಗ್ರೇನೆಡ ಕಟ್ಟಿಕೊಂಡು ಮಣಭಾರದ ಹ್ಯಾಟು, ಬೂಟು, ಕೋಟು ಹಾಕಿಕೊಂಡೇ ದಿನ, ತಿಂಗಳು, ವರ್ಷಗಳನ್ನು ಕಳೆಯುವ ಮತ್ತು ತಂದೆ, ತಾಯಿ, ಹೆಂಡತಿ, ಮಕ್ಕಳ ಪ್ರೀತಿಯಿಂದ ವಂಚಿತರಾಗಿ ದೇಶಪ್ರೇಮದ ಮುಂದೆ ಎಲ್ಲವನ್ನು ಶೂನ್ಯ ಮಾಡಿಕೊಂಡು ಹೋರಾಡುವವರಿಗೆ ಒಂದು ಸೆಲ್ಯೂಟ ಹೇಳಲೆಬೇಕಲ್ಲವೆ?

ಅಂದು ಫೆಬ್ರವರಿ 30ರ ಬೆಳಗಿನ ಜಾವ ಆದ ರುದ್ರಭಯಂಕರ ಹಿಮಪಾತ ವೀರಯೋಧರ ಮೃತ್ಯುಪಾಶವಾಗಿ ಎರಗಿ ಬಂದು ಬಿಟ್ಟಿತು. ಕ್ಷಣಾರ್ಧದಲ್ಲಿ 25 ಅಡಿ ಹಿಮದ ಬಂಡೆಗಳ ಕೆಳಗೆ ಈ ನಮ್ಮ ವೀರಯೋಧರು ಹೂತು ಹೋಗಿದ್ದರು. ಮಾಧ್ಯಮ ಪ್ರತಿಕೆಗಳಲ್ಲಿ 10 ಜನ ಯೋಧರು ಕಣ್ಮರೆಯಾದರೆಂಬ ಸುದ್ಧಿ ಹಬ್ಬುತ್ತಲೆ ತಕ್ಷಣ ಕಾರ್ಯ ಪ್ರವೃತ್ತರಾದ ಸೇನಾ ಪಡೆ ತ್ವರಿತಗತಿಯಲ್ಲಿ ಕಾರ್ಯಾಚರಣೆ ಕೈಗೊಂಡಿತು ಮರಳನ್ನೋ, ಮಣ್ಣನ್ನೋ, ಕಲ್ಲುಗಳನ್ನೊ, ಇಟ್ಟಿಗೆಗಳನ್ನೊ, ಸುಲಭವಾಗಿ ಸರಿಸಿ, ಸಿಲುಕಿದ ಯೋಧರನ್ನು ಬದುಕುಳಿಸುವ ಸುಲಭದ ಪರಿಸ್ಥಿತಿಯ ವಾತಾವರಣ ಅದಾಗಿರಲಿಲ್ಲ ಕಣ್ರಿ, ಅದೊಂದು ವಿಚಿತ್ರ ವಿಪರ್ಯಾಸ. ಸಾಧ್ಯವೇ ಆಗದ ಕಾರ್ಯ 25 ವರ್ಷಗಳ ಹಿಂದೆ ಇಂತಹದ್ದೇ ದುರಂತದಲ್ಲಿ ಸಿಲುಕಿಕೊಂಡವರನ್ನು ಇನ್ನೂ ಹೊರ ತೆಗೆಯಲು ಆಗಿಲ್ಲ ಕಾರಣ ಅಲ್ಲಿನ ಪ್ರತಿಕೂಲ ವಾತಾವರಣ.

ಆ ಹಿಮಗಡ್ಡೆಗಳೆಂದರೆ ಸಾಮಾನ್ಯವೇ? ಸಿಮೆಂಟ ಕಾಂಕ್ರೇಟಗಿಂತಲೂ ಗಟ್ಟಿಮುಟ್ಟಾಗಿರುವಂಥವುಗಳು ಸುಮಾರ–45 ರಿಂದ 50 ಡಿಗ್ರಿ ಉಷ್ಣಾಂಶದ ಹಿಮರಾಶಿ ಯಲ್ಲಿ ಕೊರೆಯುವ ಚಳಿಯಲ್ಲಿ ಕೆಲಸ ಮಾಡುವುದೆಂದರೆ ಅದೊಂದು ಪವಾಡವೇ ಸರಿ. ಆದರೂ ಎದೆಗುಂದದೆ ತ್ವರಿತಗತಿಯಲ್ಲಿ ಬೇಕಾದ ಸಲಕರಣೆಗಳನ್ನು ತೆಗೆದುಕೊಂಡು ಕಾರ್ಯಾಚರಣೆಗೆ ತೊಡಗಿದ ಸೇನಾಪಡೆ, 6 ದಿವಸಗಳ ಕಾಲ ಹರಸಾಹಸ ಪ್ರಯತ್ನದಿಂದ

9 ಯೋಧರ ಶವವನ್ನು ಹೊರ ತೆಗೆಯುವಲ್ಲಿ ಯಶಸ್ವಿಯಾದರು. ಈಗಾಗಲೇ ಸುಸ್ತಾಗಿದ್ದ ಸೇನಾಪಡೆ ಅಲ್ಲಿನ ಪ್ರತಿಕೂಲ ವಾತಾವರಣಕ್ಕೆ 30 ರಿಂದ 40 ನಿಮಿಷವಷ್ಟೆ ಕೆಲಸ ಮಾಡಬೇಕಾಗಿತ್ತು. ಕಾರಣ ಹಿಮಕಡಿತದ ಭಯ ಒಂದು ಕಡೆ. ಇಂತಹ ಪ್ರಕ್ಷುಬ್ದ ಪರಿಸ್ಥಿತಿಯಲ್ಲಿ ಯೋಧರು ಯಾರೂ ಬದುಕಿಲ್ಲ, ಆದ್ದರಿಂದ ನಂತರ ತೆಗೆದರಾಯಿತು ಎಂಬ ಮಾತು ಸೇನಾಪಡೆಯಲ್ಲಿ ವ್ಯಕ್ತವಾದರೂ ವಿವೇಕ ಪ್ರಜ್ಞೆ ಜಾಗೃತಗೊಂಡು ಇನ್ನೊಬ್ಬ ಯೋಧನಾದರೂ ಬದುಕಿರಲಿಕ್ಕೆ ಸಾಕು. ನಮ್ಮ ಕರ್ತವ್ಯ ನಾವು ಮಾಡಬೇಕೆಂದು **'ಭಾರತ ಮಾತಾ ಕೀ ಜೈ, ವಂದೇ ಮಾತರಂ'** ಎಂಬ ಜಯ ಘೋಷಗಳೊಂದಿಗೆ ಪುನ: ಕಾರ್ಯ ಪ್ರವೃತ್ತರಾದರು. ಏನಾಶ್ಚರ್ಯ! ಆ ವೀರಯೋಧ ಲಾನ್ಸ್ ನಾಯಕ ಹನುಮಂತಪ್ಪನಿದ್ದ ಜಾಗವನ್ನು ವಿಶೇಷ ತನಿಖಾ ತಂಡದ ಶ್ವಾನ (ಅಲ್ಲಲ್ಲ ಅದು ಕೂಡ ದೇಶ ಸೇವೆಯ ಸೈನಿಕ) ಪತ್ತೆ ಪ್ರಕ್ರಿಯೆಯನ್ನು ಗೊತ್ತು ಹಚ್ಚಿತು. ಮತ್ತು ರೇಡಿಯೋ ತರಂಗ, ರಾಡಾರ ಮಾಪಕಗಳು ಬದುಕಿರುವುದನ್ನು ಉಸಿರಾಟದ ಪ್ರಕ್ರಿಯೆ ಯನ್ನು ಗೊತ್ತು ಮಾಡಿದವು. ಕೆಲವೇ ಸಮಯದಲ್ಲಿ ಹಿಮದ ಬಂಡೆಗಳನ್ನು ಕೊರೆದು ರಕ್ಷಣಾ ಪಡೆಯವರು 25 ಅಡಿಯಲ್ಲಿ ಹೂತು ಹೋಗಿದ್ದ ಯೋಧನ ಹತ್ತಿರಕ್ಕೆ ತಲುಪಿದರು. ನಿಜಕ್ಕೂ ಪವಾಡವೆಂಬಂತೆ ಆ ಯೋಧ ಬದುಕಿದ್ದ. ಅಂಗಾಂಗ ಕ್ರಿಯೆಗಳೆಲ್ಲ ಮರಗಟ್ಟಿದ್ದವು. ಸೇನಾವೈದ್ಯರ ಚಿಕಿತ್ಸೆ ಫಲಕಾರಿಯಾಗಿ, ಹೃದಯ ಬಡಿತವನ್ನು ಹೆಚ್ಚಿಸಿ ಹೆಲಿಕಾಪ್ಟರ ಮೂಲಕ ಆಸ್ಪತ್ರೆಗೆ ದಾಖಲಿಸಿದರು. ಈ ಸುದ್ದಿ ತಿಳಿದು ಇಡೀ ದೇಶದ ಜನತೆಯೇ ಜಾತಿ, ಮತ, ಪಂಥ, ಪಂಗಡ, ಧರ್ಮಗಳ ಎಲ್ಲೆ ಮೀರಿ ಪ್ರಾರ್ಥನೆ ಸಲ್ಲಿಸಿದರು. "ಹನುಮಂತಪ್ಪ ಯೋಧನೇ ಬದುಕಿ ಬಾ" ಎಂದು. ಆ ಯೋಧನ ಕುಟುಂಬದಲ್ಲಿ ದು:ಖದ ಕಾರ್ಮೋಡ ಕರಗಿ ಸಂತೋಷದ ಬೆಳದಿಂಗಳು ಉದಯಿಸಿತು. ಆತನ ಹೆತ್ತಮ್ಮಳಿಗೆ ಮಗನು ಬದುಕುಳಿದ ಸಾಹಸ ಕಥೆಯನ್ನು ಕೇಳಿ ಸೊಸೆಯನ್ನು, ಮೊಮ್ಮಗಳನ್ನು ತಬ್ಬಿಕೊಂಡು ಆನಂದ ಭಾಷ್ಪ ಸುರಿಸಿದಳು. ನೊಂದು ದು:ಖದ ಮಡುವಿನಲ್ಲಿದ್ದ ಯೋಧನ ಪತ್ನಿಯ ಮುಖದಲ್ಲಿ ಮಂದಹಾಸ ಮೂಡಿತು. ಪೂಜೆಯ ಸಿದ್ಧತೆಯಲ್ಲಿ ಮನೆ ಮಂದಿಯೆಲ್ಲ ತೊಡಗಿದರು. ಊರಿನ ಮುತ್ತೈದೆಯರಿಗೆ ಉಡಿಯಕ್ಕಿ ಹಾಕಿ ಹರಸಿದರು. ತನ್ನ ಮುತ್ತೈದೆತನ ಭಾಗ್ಯ ಉಳಿದಿದ್ದಕ್ಕಾಗಿ ಅನಂತ ಬಾರಿ ದೇವರನ್ನು ಪ್ರಾರ್ಥಿಸಿ ಮಾಂಗಲ್ಯ ಕಣ್ಣಿಗೊತ್ತಿಕೊಂಡಳು. ಮಾಧ್ಯಮದವರ ಮುಂದೆ ತನಗಾದ ಸಂತೋಷನ್ನು ಹಂಚಿಕೊಂಡಳು. ನನ್ನಗಂಡ ಅಲ್ಲಲ್ಲ! ನನ್ನ ಭಾರತ ಮಾತೆಯ ವೀರಪುತ್ರ (ಯೋಧ) ಬದುಕಿ ಬಂದರೆ ಆರೋಗ್ಯ ಹೊಂದಿದ ಬಳಿಕ ಮತ್ತೆ ದೇಶ ಸೇವೆಗೆ ಕಳುಹಿಸಿಕೊಡುವೆನೆಂಬ ಸಂಕಲ್ಪವನ್ನು, ಪೂಜೆಯನ್ನು ಮಾಡಿ ದೇವರಿಗೆ ಪೂಜೆ, ಪ್ರಾರ್ಥನೆ ಗೈದಿದ್ದೇನೆಂದು ಹೇಳಿ ತಾನು ತನ್ನ ಮಗಳು ಮತ್ತು ತನ್ನ ಅತ್ತೆಯವರೊಟ್ಟಿಗೆ ಸ್ಥಳಿಯ ಶಾಸಕರು, ಸಚಿವರು ಹಾಗೂ ಮುಖ್ಯಸ್ಥರ ಸಹಾಯದಿಂದ ಯೋಧನು ಚಿಕಿತ್ಸೆ ಪಡೆ-ಯುತಿದ್ದ ದೆಹಲಿಯ ಆರ್.ಆರ್. ಆಸ್ಪತ್ರೆಗೆ ತಲುಪಿದರು. ಆದರೆ ವಿಧಿಯ ಅಟ್ಟಹಾಸವೇ ಬೇರೆಯಾಗಿತ್ತು. ಭಾರತ ಮಾತೆಯ ಕರುಳಿನ ಕುಡಿ ತನ್ನ ತಾಯಿಯ ರಕ್ಷಣೆಗಾಗಿ ಸಾಕಷ್ಟು ದುಡಿದು ದಣಿವಾರಿಸಿಕೊಳ್ಳುವಂತೆ ಪ್ರತಿ ಉಸಿರುಸಿರು 'ವಂದೇ ಮಾತರಂ' ಪಠಿಸುವಲ್ಲಿ ನಿತರವಾಗಿರುಂತೆ ಶಾಂತ ಸಾಗರದಷ್ಟು ಮೌನಿಯಾಗಿಬಿಟ್ಟಿದ್ದ. ಕೋಮಾಸ್ಥಿತಿಗೆ ತಲುಪಿ ತಾಯಿ, ಹೆಂಡತಿ ಮತ್ತು ತನ್ನ ಪ್ರೀತಿಯ ಮುದ್ದು ಕಂದಮ್ಮನ ಮುಖ ನೋಡಲಾರದವನಾಗಿದ್ದನು.

ಏಕೋ, ಕೋಟ್ಯಾಂತರ ದೇಶಭಕ್ತರ ಪ್ರಾರ್ಥನೆಗೆ ದೇವರು ಒಲಿಯಲಿಲ್ಲ. ಈ ವೀರಯೋಧನ ಹೆಸರು ಭಾರತ ಮಾತೆಯ ಕಣಕಣದಲ್ಲಿ ಅಮರವಾಗಿರಲೆಂದು ತನ್ನಡೆಗೆ ಕರೆದುಕೊಳ್ಳಲು ನಿರ್ಧಾರಮಾಡಿ ಬಿಟ್ಟಿದ್ದನೇನೊ ಗೊತ್ತಿಲ್ಲ. ನಿಷ್ಕ್ರಿಯೆಗೊಂಡ ಯೋಧನ ದೇಹ ಅಂಗವೈಕಲ್ಯದಿಂದುಳಿದೇನು

ಪ್ರಯೋಜನ? ಎಂದು ದೇಶಕ್ಕಾಗಿ ದುಡಿದ ತಾನು, ವೀರಸ್ವರ್ಗ ಪಡೆಯಲು ಎಂಟು ದಿನಗಳಿಂದ ಕ್ಷಣಕ್ಷಣವೂ ತನ್ನುಸಿರು ಭಾತಾಂಬೆಗೆ ಅರ್ಪಣೆ ಮಾಡಿ ಲಿಂಗದೇವನಲ್ಲಿ ಲೀನವಾಗಿಬಿಟ್ಟಿತು. ಮರಣ ಹತ್ತಿರವಾದರೂ ದೇಶಕ್ಕಾಗಿ ಹೋರಾಡಿದ ಒಂಬತ್ತು ಜನ ಯೋಧರಲ್ಲಿ ಹತ್ತನೆಯವರಾಗಿ ಹಿಮಪಾತದ ಕರಾಳ ಶ್ವೇತರಾಕ್ಷಸನ ಜೊತೆ ಸೆಣಸಾಡಿ ವೀರಮರಣನ್ನಪ್ಪಿದರು.

ಏನೆಂದು ಬಣ್ಣಿಸಬೇಕು ಈ ಯೋಧರನ್ನು ಶಬ್ದ ಹೊಳೆಯವು; ವಿಚಾರಗಳು ಬಾರವು. ಲೆಕ್ಕಣಿಕೆ ಮುಂದೋಡದು. ವೀರಯೋಧ ಲಾನ್ಸ್ ನಾಯಕ ಹನುಮಂತಪ್ಪ ಕೊಪ್ಪದನ ಕಳೆಬರವನ್ನು ಹುಟ್ಟೂರಿಗೆ ತಂದು ಸಹಸ್ರ ಸಹಸ್ರ ಜನಗಳ ಅಶ್ರುತರ್ಪಣದೊಂದಿಗೆ ಭಾರತ ಮಾತೆಯ ಜಯ ಜಯಕಾರದೊಂದಿಗೆ ಸಕಲ ಸರ್ಕಾರಿ ಗೌರವದೊಂದಿಗೆ ಪಂಚಭೂತಗಳಲ್ಲಿ ಲೀನಗೊಳಿಸಲಾಯಿತು.

**"ಎಮ್ಮವರಿಗೆ ಸಾವಿಲ್ಲ ಎಮ್ಮವರು
ಸಾವನರಿಯರು ಸಾವೆಂಬುದು ಸಯವಲ್ಲ
ಲಿಂಗದಲ್ಲಿ ಉದಯವಾದ ಶರಣರಿಗೆ
ಆ ಲಿಂಗದಲ್ಲಿಯಲ್ಲದೆ ಮತ್ತೊಂದು
ಎಡೆಯಲ್ಲಿ ಲಿಂಗೈಕ್ಯ ಹನುಮಂತಪ್ಪ
ಕೊಪ್ಪದರವರು ಲಿಂಗದಲ್ಲಿ ಬಗೆದು ಹೊಕ್ಕೊಡೆ
ಉಪಮಿಸಬಲ್ಲವರಾರನು ಕಾಣೆ"**

ಎಂದು ಧರ್ಮಪಿತ ಬಸವಣ್ಣನವರ ವಚನನ್ನು ಹೋಲಿಸಿ ಹೇಳಿ,

**ಜಯಬಸವರಾಜ ಭಕ್ತಜನ ಸುರಭೋಜ
ಜಯತು ಮಹಾಕಾರಣಿಕ ಲಿಂಗದೇವನ
ಘನತೇಜ । ಜಯತು ಕರುಣಾಸಿಂಧು
ಭಜಕಜನಬಂಧು ಜಯಮುಕ್ತಿದಾಯಕ
ಕರುಣಿಸು ಶ್ರೀಗುರು ಬಸವಾ**

ಎಂದು ಮಂತ್ರ ಪಠಣದೊಂದಿಗೆ ಮುಕ್ತಿ ಕೋರಿದೆವು. ಇದೇ ಸಂದರ್ಭದಲ್ಲಿ ಹೃದಯಭಾರವಾದ ದು:ಖವನ್ನೆಲ್ಲಾ ನೀಗಿಕೊಂಡು ಯೋಧನ ಮಡದಿ ಮಹಾದೇವಿಯವರು ತೆಗೆದುಕೊಂಡ ನಿರ್ಧಾರ ರೋಮಾಂಚನಕಾರಿಯಾಗಿತ್ತು. ಶಿವಾಜಿಯ ತಾಯಿ ಜೀಜಾಮಾತೆ, ಗಾಂಧೀಜಿಯವರ ತಾಯಿ ಪುತಳಿಬಾಯಿ, ವಿವೇಕಾನಂದರ ತಾಯಿ ಭುವನೇಶ್ವರಿ, ಚನ್ನಬಸವಣ್ಣನವರ ಮಾತೆ ಅಕ್ಕನಾಗಲಾಂಬಿಕೆ, ಕಿತ್ತೂರ ರಾಣಿ ಚನ್ನಮ್ಮ, ಕೆಳದಿ ಚನ್ನಮ್ಮನವರಂತಹ ವೀರಮಾತೆಯರು ದೇಶಪ್ರೇಮ, ಧರ್ಮರಕ್ಷಣೆಗಾಗಿ ತಮ್ಮ ಮಕ್ಕಳನ್ನು ಮುಡಿಪಾಗಿಟ್ಟು ಅದರಂತೆ ಬೆಳೆಸಿ ಕೀರ್ತಿಗೆ ಭಾಜನರಾದರು. ಅವರಂತೆ ಇವರು ಕೂಡ ತನ್ನ ಗಂಡನ ಆತ್ಮಕ್ಕೆ ಶಾಂತಿಗಾಗಿ ಪ್ರಾರ್ಥಿಸುತ್ತ ಕೊನೆಗೆ ಏನು ಹೇಳಿದರು ಗೊತ್ತೆ? 'ದೇಶ ಕಾಯುವ ಸೈನಿಕನನ್ನು ಮದುವೆಯಾಗಬೇಕು ಎಂಬ ಆಸೆಯಿಂದಲೇ ಹನುಮಂತಪ್ಪ ಅವರನ್ನು ಮೆಚ್ಚಿ ಮದುವೆಯಾಗಿದ್ದೇನೆ. ಒಂದುವರೆ ವರ್ಷದ ಮಗಳು ನೇತ್ರಾವತಿಯನ್ನು ಚೆನ್ನಾಗಿ ಓದಿಸಿ ಸೇನೆಗೆ ಸೇರಿಸುತ್ತೇನೆ. ಇಲ್ಲವೆ ಸೈನಿಕನಿಗೆ ಕೊಟ್ಟು ಮದುವೆ ಮಾಡುತ್ತೇನೆ. ಭಾರತ ಮಾತೆಯ ರಕ್ಷಣೆಗಾಗಿ ನನ್ನ ಪ್ರಾಣ ನೀಡಲೂ ಸಿದ್ಧ' ಎಂದು ಶಪಥ ಮಾಡಿದಳು.

ಅಬ್ಬಾ! ನೋಡಿದಿರಾ! ದೇಶಕ್ಕಾಗಿ, ಧರ್ಮಕ್ಕಾಗಿ ದುಡಿಯಲು ಸೈನಿಕ ಸನ್ಯಾಸಿಯಾಗುತ್ತೇನೆಂದರೆ ಅದ್ಯಾವ ತಾಯಿ, ಅದ್ಯಾವ ಕುಟುಂಬ ಸಂತೋಷದಿಂದ ಕಳುಹಿಸುತ್ತದೆ ಹೇಳಿ. ಆದರೆ ಇದಕ್ಕೆ ಅಪವಾದ ಎಂಬಂತೆ ಯೋಧನ ಮಡದಿ ಮಹಾದೇವಿ ಕೊಪ್ಪದ ಅವರಲ್ಲವೆ? ಇದು ಕಣ್ರೆ ದೇಶಭಕ್ತಿ, ದೇಶಪ್ರೇಮ, ಭಾರತಾಂಬೆಗೆ ಋಣ ತೀರಿಸುವ ಛಲ! ಹುಟ್ಟಿದರೆ ದೇಶಕ್ಕಾಗಿ, ಸೇವೆಗೈದರೆ ದೇಶಕ್ಕಾಗಿ, ಸತ್ತರೆ ದೇಶಕ್ಕಾಗಿ ಎಂಬ ಇವರ ನುಡಿ ಇಂದು ಪ್ರತಿಯೊಬ್ಬ ಭಾರತ ದೇಶದ ಪ್ರಜೆಯಲ್ಲಿ ಹುಟ್ಟಬೇಕು. ಇಂಥವರನ್ನು ಪಡೆದ ಭಾರತ ಮಾತೆ ಧನ್ಯ, ಕರ್ನಾಟಕ ಮಾತೆ ಧನ್ಯ. ನಾವೇ ಭಾಗ್ಯವಂತರು. ಕೊನೆಯದಾಗಿ ಹಿಮಪಾತದಲ್ಲಿ ಮಡಿದ ಯೋಧರಿಗೆ ಮತ್ತು ಹನುಮಂತಪ್ಪ ಕೊಪ್ಪದ ಯೋಧನ ಆತ್ಮಕ್ಕೆ ಶಾಂತಿ ಸಿಗಲಿ. ದೇಶಕ್ಕಾಗಿ ಮರಳಿ ಬರಲಿ. ಹಾಗೂ ಅವರ ಧರ್ಮ ಪತ್ನಿಯ ಸಂಕಲ್ಪ ಈಡೇರಲಿ ಎಂದು ಈ ಕವನದಿಂದ ಸ್ಮರಿಸುವಾ....................

ನಿಶ್ಪತ್ತಿಯೆಂಬ ಹಣ್ಣಾಯಿತ್ತು,
ನಿಶ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬಿಳುವಲ್ಲಿ
ಲಿಂಗದೇವಾತನಗೆ ಬೇಕೆಂದು ಎತ್ತಿಕೊಂಡ."

ಗುರು ಬಸವಣ್ಣನವರ ಸಾಧಕಾವಸ್ಥೆಯಲ್ಲಿ ಭಾವನಾತ್ಮಕವೂ ಕಲ್ಪಿತವೂ ಆದ ಐಕ್ಯ ಸ್ಥಾನದ ಬೇಡುವಿಕೆಯಿದ್ದರೆ, ಗುರು ಬಸವಣ್ಣನವರ ಸಿದ್ಧಾವಸ್ಥೆಯಲ್ಲಿ ಅಥವಾ ಪರಿಪೂರ್ಣಾವಸ್ಥೆಯಲ್ಲಿ ಭಾವನೆ ಕಲ್ಪನೆಗೆಲ್ಲಕ್ಕೂ ಅತೀತವಾದ ಆತ್ಯಂತಿಕ ಶರಣಾಗತಿಯ ನಿಲುವಿನ ಬೇಡುವಿಕೆಯೇ ಇಲ್ಲದ ನಿರ್ಮಲ, ನಿಶೂನ್ಯ, ನಿಜೈಕ್ಯ ಲಿಂಗೈಕ್ಯದ ಕೊಡಲು ತೆಗೆದುಕೊಳ್ಳಲು ಸ್ಥಾನ ಕಾಲ ಮಿತಿಗಳೇ ಇಲ್ಲದ, ಸ್ಥಾನಾತೀತ ಪದಾತೀತ ಪಡೆಯುವಿಕೆಯನ್ನು ದೇವಾನುಗ್ರಹವನ್ನು ಕಾಣುತ್ತೇವೆ. ಹೀಗೆ ಮಹಾಗುರು ಬಸವಣ್ಣನವರು ಜಗನ್ಮಾತೆ ಅಕ್ಕಮಹಾದೇವಿಯವರು ವ್ಯೋಮಕಾಯಸಿದ್ಧ ಅಲ್ಲಮಪ್ರಭುದೇವರು, ಮಹಾಯೋಗಿ ಸಿದ್ಧರಾಮೇಶ್ವರರ ಜೀವನ ಕ್ರಮಣಿಕೆಯಲ್ಲಿ ಸ್ಪಷ್ಟವಾದ ಮಹತ್ತರವಾದ ಬದಲಾವಣೆಗಳನ್ನು ಗುರುತಿಸಬಹುದು. ಇಂತಹ ವಿಮರ್ಶಾತ್ಮಕ ಶ್ರೇಷ್ಠ ಚಿಂತನ ಗ್ರಂಥಗಳ ಸಾಲಿನಲ್ಲಿ 29ನೇ ಶರಣ ಮೇಳ ಮಹಾಗಣ ಸಮಾವೇಶದಲ್ಲಿ ಬಿಡುಗಡೆಗೊಂಡ 'ಹರನೆಡೆಯಿಂದ ಪರಮನೆಡೆಗೆ' ಎಂಬ ಪುಟ್ಟ ಗ್ರಂಥವು ಗಮನಾರ್ಹವಾದುದು.

"ಹರಿಯೆಂಬಾತ ನಿಮ್ಮ ಚರಣನವನರಿಯ, ಬ್ರಹ್ಮನೆಂಬಾತ ನಿಮ್ಮ ಮುಕುಟವನರಿಯ ಯತಿ, ವ್ರತಿ, ಋಷಿಗಳೆಂಬವರು ನಿಮ್ಮ ಒಳಗನರಿಯರು. ಸಮಸ್ತ ದೇವರ್ಕಳು ನಿಮ್ಮ ರೋಮದ ಪ್ರಮಾಣನವನರಿಯರು, ಶತಕೋಟಿ ಸೂರ್ಯರೂ ನಿಮ್ಮ ಬೆಳಗ ಕಾಣಲರಿಯರು ಕಪಿಲಸಿದ್ಧ ಮಲ್ಲಿಕಾರ್ಜುನ ದೇವರದೇವ ನಾ ನಿಮ್ಮನರಿಯಬಲ್ಲವನೇ ಅಯ್ಯಾ"

ಹರಿ, ಬ್ರಹ್ಮ, ಯತಿ, ವ್ರತಿ, ಋಷಿಮುನಿಗಳು ಮತ್ತು ಸಮಸ್ತ ದೇವತೆಗಳನ್ನು ಮಹಾಮಹಿಮರೆಂದು ಪೂಜಿಸುತ್ತಾರೆ. ಯಜ್ಞ-ಯಾಗ ಹವನ-ಹೋಮಗಳನ್ನು ಮಾಡುತ್ತಾರೆ. ಶೈವ ಧರ್ಮಾರಾಧಕರಾದ ಸಿದ್ಧರಾಮೇಶ್ವರರು ಮೊದಮೊದಲಿಗೆ ಈ ಎಲ್ಲವನ್ನು ಮಾಡಿದರಾದರೂ, ತಮಗೆ ಜ್ಞಾನೋದಯವಾದಾಗ ಹೀಗೆ ಹೇಳುತ್ತಾರೆ,

"ಕಪಿಲಸಿದ್ಧ ಮಲ್ಲಿಕಾರ್ಜುನ ದೇವರದೇವ ನಾ ನಿಮ್ಮನರಿಯದ ಮುನ್ನ ಕರ್ಮವ ಪೂಜಿಸಿದ ಕಾರಣ, ಹರಿ ಬ್ರಹ್ಮ ಯತಿ ವ್ರತಿ ಇವರಾರೂ ನಿನ್ನ ಚರಣ, ಮಣಿ ಮುಕುಟ ರೋಮದ ಪ್ರಮಾಣವ ಅರಿಯರು. ಶತಕೋಟಿ ಸೂರ್ಯಪ್ರಭೆ ಉಳ್ಳವರಿಂದಲೂ ನಿನ್ನನರಿಯಲಾಗದೆ ಹೋಗಿರುವಾಗ ನಾನಿಮ್ಮನರಿಯಬಲ್ಲೆನೇ? ಅಯ್ಯಾ" ಎಂದು ಉದ್ಘರಿಸಿದರು. **"ಕಣ್ಣೇಯಿಲ್ಲದವರು ಕಣ್ಣಿಲ್ಲದ ಅಂಧರನ್ನೆ ಪೂಜಿಸಿ, ಬೆಳಕಕಂಡವರುಂಟೆ?"** ಎಂಬ ಭಾವ ದೇವನ ನಿಜವನರಿವಲ್ಲಿ ವ್ಯಕ್ತಪಡಿಸಲಾಗಿದೆ.

ಸಾಮಾನ್ಯರ ಜೀವನಾವಲೋಕನಗೈದು ಅವರ ವ್ಯಕ್ತಿತ್ವ, ಬದುಕು, ಸಾಧನೆಗಳ ಕುರಿತಾಗಿ ವಿಮರ್ಶಿಸುವುದು ಅವರ ಭಾವನೆ, ಚಿಂತನೆ, ವಿಚಾರಗಳನ್ನು ಅರ್ಥೈಸಿಕೊಳ್ಳುವುದು, ಬರೆಯುವುದು ಬೌದ್ಧಿಕ ಪರುತ್ವ ಹೊಂದಿರುವವರಿಗೆ ಸ್ವಲ್ಪ ಸರಳವೂ, ಸುಲಭವೂ ಎಂದೆನಿಸಬಹುದು. ಆದರೆ ವಿವಿಧ ಕಾಲಘಟ್ಟಗಳಲ್ಲಿ ಆಗಿಹೋದ ವ್ಯಕ್ತಿಗಳು ಮತ್ತು ಅವರಿಂದ ಸೃಜಿಸಲ್ಪಟ್ಟ ಸಾಹಿತ್ಯ ವಿಮರ್ಶೆಗಳು ಸಾಮಾಜಿಕ ತಜ್ಞರ ಚಿಂತನೆಗಳ ಅವಲೋಕನೆಗಳು, ನೀತಿ-ನಿಯಮ-ನಿರ್ದೇಶನಗಳ ಬಗೆಗಿನ ಚರ್ಚೆಗಳು, ಗಣಿತ ವಿಜ್ಞಾನ, ಖಗೋಳಜ್ಞಾನ, ಕಾಲಾಜ್ಞಾನ ತಜ್ಞರ, ಸೂತ್ರ-ಪಾತ್ರಗಳ ಸಂಶೋಧನೆಗಳನ್ನು ಪೂರ್ವಾಗ್ರಹ ಪೀಡಿತವಿಲ್ಲದೆ, ಸರಿಯಾಗಿ ಅರ್ಥೈಸಿಕೊಂಡು, ಅರಿತ ವಿಚಾರ, ಜ್ಞಾನ, ಭಾವನೆಗಳನ್ನು ಅಕ್ಷರ ರೂಪಕ್ಕಿಳಿಸಿ, ಸಂಬಂಧಿಸಿದ ವಸ್ತು, ವಿಷಯದ ಬಗ್ಗೆ ಓದುವವರ ಹೃದಯದ ಕದತಟ್ಟಿ ಭಾವನಾತ್ಮಕವಾಗಿ ನಿರೂಪಿಸಿ ತಿಳಿಯುವ ಹಾಗೆ ಬರೆಯುವುದು ಬೌದ್ಧಿಕವಾಗಿ ಬಹಳ ಶ್ರಮದಾಯಕವಾದುದು. ಸಾವಿರಾರು

ವರ್ಷಗಳ ಹಿಂದೆ ಆಗಿಹೋದ ಮಹಾತ್ಮರ, ದಾರ್ಶನಿಕರ, ತತ್ವವೇತ್ತರ, ಸಮಾಜ ಸುಧಾರಕರ, ಧರ್ಮ ಸಂಸ್ಥಾಪಕರ, ಜೀವನ-ಜ್ಞಾನ-ಅನುಭಾವ-ಚಿಂತನ ವಿಮರ್ಶೆಗಳ ಬಗ್ಗೆ ಅವರ ಜೀವನದ ಆರಂಭಿಕ, ಮಧ್ಯಮ, ಪ್ರೌಢ ಮತ್ತು ದಾರ್ಶನಿಕ ಆತ್ಯಂತಿಕ ಹಂತಗಳ ಬಗೆಗೆ ನಿಖರವಾಗಿ ಬರೆಯುವುದು ವಿಮರ್ಶಿಸುವುದು ಸಾಧನೆ ಫಲಿತಾಂಶಗಳ ನಿಖರತೆಯನ್ನು ಗುರುತಿಸಿ ಗ್ರಂಥಾಕ್ಷರ ರೂಪಕ್ಕಿಳಿಸುವುದು ಸಾಮಾನ್ಯ ಸಾಧಕ, ಪಂಡಿತ, ಬುದ್ಧಿಜೀವಿಗಳಿಗೆ ಸಾಧ್ಯವಾಗದು. ಅದೇನಿದ್ದರೂ ಮನ, ಭಾವ, ವಿಚಾರ, ಅನುಭಾವ-ಆಚಾರ ಉನ್ನತೀಕರಣಗೊಂಡಂತವರಿಂದ ಮಾತ್ರ ಸಾಧ್ಯವಾಗುವಂಥದು. "ಹರನೆಡೆಯಿಂದ ಪರಮನೆಡೆಗೆ" ಎಂಬ ನೂರು ಪುಟಗಳ ಪುಟ್ಟ ಗ್ರಂಥವು ಕ್ರಿ.ಪೂ. 21817(ಹರನ ಕಾಲ) ವರ್ಷಗಳಷ್ಟು ಹಿಂದಿನ ಹರನಿಂದಿಡಿದು ಇಂದಿನ 2016ರ ಪರಮನವರೆಗೂ ಖಚಿತವಾದ, ನಿಶ್ಚಿತವಾದ, ವಿಚಾರ ವಿಮರ್ಶೆಗಳನ್ನು ಒಳಗೊಂಡ ಶ್ರೇಷ್ಠ ಗ್ರಂಥವಾಗಿ ಹೊರಹೊಮ್ಮಿದೆ. ಗುರು ಬಸವಣ್ಣನವರು ಜಗನ್ಮಾತೆ ಅಕ್ಕಮಹಾದೇವಿಯವರು ಮತ್ತು ಮಹಾಯೋಗಿ ಸಿದ್ಧರಾಮೇಶ್ವರರ ವಚನಗಳನ್ನಾಧರಿಸಿ ಜೀವನಾವಲೋಕನಗೈದು ವಿಮರ್ಶಿಸಿದ ಪುಸ್ತಕ ಓದುವಾಗ ಅದರಲ್ಲಿರುವ ಅಂಶಗಳು ಕುತೂಹಲ ಮೂಡಿಸುವುದಲ್ಲದೆ, ಪೂರ್ಣವಾಗಿ ಓದುವವರೆಗೂ ವಿರಾಮ ನೀಡದಂತೆ ಓದಿಸಿಕೊಂಡು ಹೋಗಿ ಜ್ಞಾನದ ಆಳ ಹರವುಗಳನ್ನು ನಮಗರಿವಿಲ್ಲದಂತೆ ವಿಸ್ತರಿಸುತ್ತದೆ. ಇಂತಹ ಜ್ಞಾನಾನುಭಾವಿ ಲೇಖಕರಿಂದ ಇನ್ನೂ ಶ್ರೇಷ್ಠವಾದ ವಿಚಾರವುಳ್ಳ ವಚನ ನವನೀತ ಹೊರಹೊಮ್ಮಲಿ ಎಂದು ಸದಾ ಆಶಿಸುತ್ತಾ ಅವರಿಗೂ, ಅವರಿಗೆ ಸಹಕರಿಸಿದೆಲ್ಲರಿಗೂ ಹೃತ್ಪೂರ್ವಕವಾದ ಶುಭ ಹಾರೈಸೋಣ.



ಪುರಾಣಗಳ ಪ್ರಪಂಚ



ಚಿನ್ನ ಕೊಡುವ ಕತ್ತೆ

✻ ಎಸ್.ಕಿರಣ್

ಒಂದು ಹಳ್ಳಿಯಲ್ಲಿ ಒಬ್ಬ ಬಡವನಿದ್ದನು. ಅವನ ಹೆಂಡತಿ ಚಂದ್ರನೆಂಬ ಒಬ್ಬ ಮಗನನ್ನು ಹೆತ್ತು, ಆಮೇಲೆ ಸತ್ತುಹೋಗಿದ್ದಳು. ಚಂದ್ರ ಯುವಕನಾಗುತ್ತಿದ್ದಂತೆ ಕಷ್ಟಪಟ್ಟು ದುಡಿಯುತ್ತಿದ್ದ ಆದರೆ ತಂದೆ ಸೋಮಾರಿಯಾಗಿದ್ದ. ಇವರ ಮನೆಗೆ ಸಮೀಪದ ಇನ್ನೊಂದು ಮನೆಯಲ್ಲಿ ಹುಡುಗಿಯೊಬ್ಬಳಿದ್ದಳು. ಅವಳು ಬಡವಳಾದರೂ ತುಂಬಾ ಚುರುಕಿನ ಹುಡುಗಿಯಾಗಿದ್ದಳು. ಚಂದ್ರ, ಅವಳನ್ನು ವಿವಾಹವಾಗಲು ನಿರ್ಧರಿಸಿದ. ಹುಡುಗಿ ಮತ್ತು ಅವಳ ಮನೆಯವರೂ ಇದಕ್ಕೆ ಒಪ್ಪಿದ್ದರು. ಆದರೆ ಚಂದ್ರನ ತಂದೆ ಆ ಬಡ ಹುಡುಗಿಯನ್ನು ಸೊಸೆಯಾಗಿ ತರಲು ಒಪ್ಪಲಿಲ್ಲ.

ತಾನು ಎಲ್ಲಾದರೂ ದೂರಹೋಗಿ ದುಡಿದು ಹಣ ಸಂಪಾದನೆ ಮಾಡಿ ಬಂದು ಅವಳನ್ನು ವಿವಾಹ ಮಾಡಿಕೊಳ್ಳುತ್ತೇನೆ ಎಂದು ನಿಶ್ಚಯಿಸಿ, ಮನೆ ಬಿಟ್ಟು ಹೊರಟ. ಒಂದು ಊರಿನ ಪಕ್ಕ ನಡೆಯುತ್ತಿದ್ದಾಗ, ಮುದುಕಿಯೊಬ್ಬಳು ಸೌದೆ ಹೊರಲಾರದೆ ಕಷ್ಟಪಡುವುದನ್ನು ಕಂಡು ನಾನು ಹೊತ್ತು ನಿಮ್ಮ ಮನೆಗೆ ತರುತ್ತೇನೆ ಎಂದು ಅವಳ ಮನೆಗೆ ಸೌದೆ ಕಟ್ಟವನ್ನು ತಂದು ಹಾಕಿದ. ಮುದುಕಿ, ಅವನ ಕುರಿತು ವಿಚಾರಿಸಿ, ನೀನು ನನ್ನ ಬಳಿ ಕೆಲಸ ಮಾಡು ವರ್ಷದ ಕೊನೆಗೆ ನಾನು ನಿನಗೆ ಪ್ರತಿಫಲ ಕೊಡುತ್ತೇನೆ ಎಂದಳು.

ಒಂದು ವರ್ಷ ದುಡಿದ ನಂತರ, ಮುದುಕಿ ಕತ್ತೆಯೊಂದನ್ನು ಕೊಟ್ಟು ಇದು ಅಸಾಮಾನ್ಯ ಕತ್ತೆ. ಇದರ ಕಿವಿ ಹಿಡಿದು ಎಳೆದರೆ ಬಾಯಿಯಿಂದ ಚಿನ್ನದ ನಾಣ್ಯ ಬೀಳುತ್ತವೆ ಎಂದಳು. ಸಂತೋಷದಿಂದ ಚಂದ್ರ ಮನೆಗೆ ಹೋಗುವಾಗ ಕತ್ತಲಾಯಿತು. ಆಗ ಅಡುಗೂಲಜ್ಜಿಯ ಮನೆಯಲ್ಲಿ ಉಳಿದ. ಬೆಳಗ್ಗೆ ವಸತಿಯ ಹಣ ಕೊಡಲೆಂದು ಕತ್ತೆ ಕಿವಿ ಹಿಡಿದು ಎಳೆದ. ಚಿನ್ನದ ನಾಣ್ಯ ಸಿಕ್ಕವು. ಸಿಕ್ಕಿದ ನಾಣ್ಯಗಳಲ್ಲಿ ಅಡುಗೂಲಜ್ಜಿಗೆ ಕೊಡಬೇಕಾದ್ದನ್ನು ಕೊಟ್ಟು ಹೊರಟ. ಇದನ್ನು ಗಮನಿಸಿದ ಅಜ್ಜಿ ಸಮಯ ಸಾಧಿಸಿ ಆ ಕತ್ತೆ ಅಡಗಿಸಿ, ಬೇರೊಂದನ್ನು ಅದರ ಜಾಗದಲ್ಲಿ ಕಟ್ಟಿಹಾಕಿದ. ಚಂದ್ರ ಮನೆಗೆ ತಲುಪಿ ತಂದೆಗೆ ಕತ್ತೆ ತೋರಿಸಿ ಅದರ ಮಹಿಮೆ ಹೇಳಿ, ಕತ್ತೆಯ ಕಿವಿ ಹಿಡಿದು ಎಳೆದ. ಆಗ ಕತ್ತೆ ನೋವಿನಿಂದ ಹಿಂಗಾಲಿನಿಂದ ತಂದೆಗೆ ಜೋರಾಗಿ ಒದೆಯಿತು. ತಂದೆ ಸಿಟ್ಟಿನಿಂದ ಚಂದ್ರನನ್ನು ಮನೆ ಬಿಟ್ಟು ಓಡಿಸಿದ.

ದಾರಿಯಲ್ಲಿ ಹೋಗುವಾಗ ಸನ್ಯಾಸಿ ಆಶ್ರಮ ಕಂಡು ಒಳಗೆ ಹೋಗಿ ನಡೆದಿದ್ದನ್ನು ಹೇಳಿ ಅಲವತ್ತುಕೊಂಡ. ಆಶ್ರಮದ ಕೆಲಸ ಮಾಡುತ್ತ ಒಳ್ಳೆಯವನು ಎನಿಸಿಕೊಂಡಾಗ ಸನ್ಯಾಸಿ ಸಂತೋಷದಿಂದ ಕೋಲನ್ನು ಕೊಟ್ಟು ಇದನ್ನು ಹಿಡಿದು ಹೊಡಿ ಎಂದರೆ ನೀನು ಸಾಕು ನಿಲ್ಲಿಸು ಎಂದು ಹೇಳುವ ವರೆಗೆ ಎದುರುರಿಗಿದ್ದವರಿಗೆ ಹೊಡೆಯುತ್ತದೆ ಎಂದು ಹೇಳಿದ. ಚಂದ್ರ ನೇರವಾಗಿ ಅಡುಗೂಲಜ್ಜಿ ಮನೆಗೆ ಬಂದು ಕತ್ತೆ ಕೊಡು ಎಂದು ಕೇಳಿದ. ಅಜ್ಜಿ ಕತ್ತೆ ಕೊಡಲೊಪ್ಪಲಿಲ್ಲ. ಕೂಡಲೇ ಚಂದ್ರ ಕೋಲನ್ನು ಹಿಡಿದು, ಹೊಡಿ ಎಂದ. ಕೋಲು ಹಿಗ್ಗಾ ಮುಗ್ಗಾ ಹೊಡೆಯತೊಡಗಿತು. ಹೊಡೆ ತಾಳಲಾರದೆ ಅಜ್ಜಿ ಕತ್ತೆಯನ್ನು ಕೊಟ್ಟಳು. ನಂತರ ಚಂದ್ರ ಮನೆಗೆ ಬಂದು ತಾನು ಪ್ರೀತಿಸಿದ ಹುಡುಗಿಯನ್ನು ವಿವಾಹವಾಗಿ ಸುಖವಾಗಿದ್ದ.

ಮನೋ ದೈಹಿಕ ರೋಗ

ಛತ್ರಾವತಿ ಸಂತೋಷ್
ಆಪ್ತ ಸಮಾಲೋಚಕರು ಮತ್ತು ಮನೋಚಿಕಿತ್ಸಕರು
B.Com, PGDMM, M.S. (Counseling & Psychotherapy) DPCS, CLST, CSC.

ಆರೋಗ್ಯ ಕಿರಣ



ಮನೋದೈಹಿಕ ರೋಗ [Psychosomatic Disorder or Physiological Disorder] ಎಂದರೆ ಮನಸ್ಸಿನ ಮೇಲೆ ಆಗುವಂತಹ ಅತೀಯಾದ ಒತ್ತಡ, ಟೆನ್‌ಷನ್ ಇತ್ಯಾದಿಗಳು ದೈಹಿಕ ರೋಗದ ರೂಪದಲ್ಲಿ ಕಾಣಿಸಿಕೊಳ್ಳಲು ಶುರುವಾಗುತ್ತದೆ. ಇದೇ ಮನೋದೈಹಿಕ ರೋಗ. ಇದನ್ನು ನೈಜ ಘಟನೆಯ ಮೂಲಕ ವಿವರಿಸುತ್ತೇನೆ. ಕೆಲವು ದಿನಗಳ ಹಿಂದೆ ನನ್ನನು ಕಾಣಲು ಬಂದ ವ್ಯಕ್ತಿಯೊಬ್ಬರು ಸರ್. ನನಗೆ ಅತೀಯಾದ ಗ್ಯಾಸ್ಟ್ರಿಕ್ ಸಮಸ್ಯೆ ಇದೆ. ಆದರೆ ನಾನು ಚಿಕ್ಕವಯಸ್ಸಿನಿಂದಲೂ ಸರಿಯಾದ ಸಮಯಕ್ಕೆ ಆಹಾರ ಸೇವಿಸುವ ಅಭ್ಯಾಸ ಬೆಳಸಿಕೊಂಡಿದ್ದೇನೆ ಹಾಗೂ ನಿತ್ಯವೂ ಉತ್ತಮವಾದ ಆಹಾರ, ತರಕಾರಿ, ಹಣ್ಣುಗಳನ್ನು ಬಳಸುತ್ತೇನೆ ಮತ್ತು ಹೋಟೆಲ್‌ನಲ್ಲಿ ಊಟ ಮಾಡುವುದಾಗಲೀ, ಕರಿದ, ಮಸಾಲೆಯುಕ್ತ ಹಾಗೂ ಹೆಚ್ಚು ಖಾರವಿರುವ ಪದಾರ್ಥವನ್ನು ತಿನ್ನುವುದಿಲ್ಲ. ಆದರೂ ನನಗೆ ಗ್ಯಾಸ್ಟ್ರಿಕ್ ಸಮಸ್ಯೆ ಇದೆ. ಹಾಗೂ ನಾನು ಅವರ ಇಡೀ ದಿನಚರಿ ಹಾಗೂ ಅವರ ಜೀವನ ಶೈಲಿಯನ್ನು ವಿವರವಾಗಿ ತಿಳಿದುಕೊಂಡೆ.

ಅದರಲ್ಲಿ ಕಂಡು ಬಂದ ಅಂಶವೇನೆಂದರೆ, ಅವರು ಸೇವಿಸುವ ಉತ್ಕೃಷ್ಟ ಆಹಾರ ಮತ್ತು ಸಮಯ ಎಲ್ಲಾ ಸರಿಯಿದ್ದರೂ ಅವರ ಜೀವನ ಶೈಲಿಯು ತುಂಬಾ ಒತ್ತಡ ಹಾಗೂ ಟೆನ್‌ಷನ್/ಉದ್ವೇಗದಿಂದ ಕೂಡಿತ್ತು. ಹಾಗೂ ಇದು ಅವರ ಗ್ಯಾಸ್ಟ್ರಿಕ್ ಸಮಸ್ಯೆಯ ಮೂಲವಾಗಿತ್ತು. ನಂತರ ಅವರಿಗೆ ನಾನು ಒತ್ತಡ ನಿರ್ವಹಣೆ, ರಿಲ್ಯಾಕ್ಸೇಷನ್ ಥೆರಪಿ [Relaxation Therapy] ಹಾಗೂ ಆರೋಗ್ಯಕರ ಜೀವನ ಶೈಲಿಯ ಮಾರ್ಗವನ್ನು ತಿಳಿಸಿಕೊಟ್ಟೆ, ಕ್ರಮೇಣ ರೋಗವು ಇಳಿಮುಖವಾಗುತ್ತಾ ಬಂತು. ಇಂತಹ ಒಂದು ಸಮಸ್ಯೆಯನ್ನು ವೈದ್ಯಕೀಯ ಭಾಷೆಯಲ್ಲಿ ಜಠರಗರುಳಿನ ಅಸ್ವಸ್ಥತೆ [Gastrointestinal] ಎಂದು ಕರೆಯುತ್ತಾರೆ. ಹಾಗಾದರೆ ಈಗ ನಾವು ಮನೋದೈಹಿಕ ರೋಗ ಎಂದರೇನು? ಹಾಗೂ ಅತೀಯಾದ ಮನಸ್ಸಿನ ಒತ್ತಡ ಯಾವೆಲ್ಲಾ ದೈಹಿಕ ರೋಗದ ಮೂಲಕ ಕಾಣಿಸಿಕೊಳ್ಳುತ್ತದೆ ಎಂದು ಸ್ವಲ್ಪ ವಿವರವಾಗಿ ನೋಡೋಣ.

ಜನ ಸಂಖ್ಯೆಯ ಶೇ.25 ಜನ ಮಾನಸಿಕ ಅಸ್ವಸ್ಥರೆಂದು ಸರ್ವೇಕ್ಷಣ [Survey] ಗಳು ತಿಳಿಸುತ್ತದೆ ಹಾಗೂ ಶೇಕಡ 90% ರಷ್ಟು ಜನ ಒತ್ತಡ, ಟೆನ್‌ಷನ್ ಹಾಗೂ ಭಾವನಾತ್ಮಕ ಒತ್ತಡದ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ತಿಳಿಸಿವೆ.

ನಾವು ಚಿಕ್ಕ ವಯಸ್ಸಿನಿಂದಲಾದರೂ ಅಥವಾ ಯುಕ್ತ ವಯಸ್ಸಿನಲ್ಲಾದರೂ ನಕರಾತ್ಮಕ ಭಾವನೆಗಳಾದ ದುಃಖ, ಕೋಪ, ಭಯ, ಮತ್ಸರ ಅಥವಾ ಅತೀಯಾದ

ಒತ್ತಡ ಮತ್ತು ಉದ್ವೇಗ ಇಂತಹವುಗಳಿಂದ ಬಳಲುತ್ತಿದ್ದರೆ ಅಥವಾ ಹಲವಾರು ಬಾರಿ ಸಾಮಾಜಿಕ ಕಾರಣದಿಂದಲೂ ಅಥವಾ ವ್ಯಯಕ್ತಿಕ ಕಾರಣಗಳಿಂದಲೂ ಆತ್ಮೀಯರಲ್ಲಿ ಹೇಳಿ ಮನಸ್ಸನ್ನು ಹಗುರ ಮಾಡಿಕೊಳ್ಳಬಹುದಾದ ವಿಷಯಗಳನ್ನು ನಾವು ನಮ್ಮಲ್ಲೇ ಅದುಮಿಟ್ಟುಕೊಳ್ಳುತ್ತೇವೆ ಹಾಗೆಯೇ ಅದುಮಿಟ್ಟ ಭಾವನೆಗಳು ಅಥವಾ ವಿಷಯ ಹಾಗೂ ಯೋಚನೆಗಳು ನಮ್ಮನು ತೀವ್ರವಾಗಿ ಮತ್ತು ದೀರ್ಘ ಕಾಲ ಕಾಡಿದ-ರೆ ನಮಗೆ ವಿವಿಧ ಬಗೆಯ ಮಾನಸಿಕ ಅಸ್ವಸ್ಥತೆಗಳು ಕಾಣಿಸಿಕೊಳ್ಳಬಹುದು. ಹಾಗೂ ತೀವ್ರವಾಗಿ ಅದುಮಿಟ್ಟ ಭಾವನೆಗಳಿಂದ ನಮ್ಮ ದೇಹದಲ್ಲಿ ಹೆಚ್ಚು "ಅಡ್ರಿನಲಿನ್ ಕಾರ್ಟಿಸಾಲ್" ಎಂಬ ಸ್ಟ್ರೆಸ್ ಹಾರ್ಮೋನುಗಳು ಉತ್ಪತ್ತಿಯಾಗುತ್ತದೆ. ಹಾಗೂ ಹೀಗೆ ಉತ್ಪತ್ತಿಯಾದ ಹಾರ್ಮೋನುಗಳು ಸಾಮಾನ್ಯ ಶಾರೀರಿಕ ರೋಗಗಳಾದ ನೋವು, ಆಯಾಸ, ಬಳಲಿಕೆ, ನಿದ್ರಾಹೀನತೆ, ಅಜೀರ್ಣ ಮತ್ತು ಮಲವಿಸರ್ಜನೆಗೆ ಸಂಬಂಧಿಸಿದ ತೊಂದರೆಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಅಷ್ಟೇ ಅಲ್ಲದೆ, ಈ ಹಾರ್ಮೋನುಗಳಿಂದ ನಮ್ಮ ದೇಹದ ಒಳ ಅಂಗಗಳು ಹೆಚ್ಚು ಸವೆಯುತ್ತದೆ ಹಾಗೂ ರೋಗಗ್ರಸ್ಥವಾಗುತ್ತದೆ ಮತ್ತು ಇದು ದೀರ್ಘ ಕಾಲಿನ ರೋಗಗಳಾದ ಸಕ್ಕರೆ ಕಾಯಿಲೆ [Diabetic], ಅಧಿಕ ರಕ್ತದೊತ್ತಡ [Blood Pressure], ಮೈಗ್ರೇನ್ ಅಥವಾ ಟೆನ್ಷನ್ ತಲೆನೋವು, ಸ್ವಲ್ಪ ಸಮಯದಲ್ಲಿ ಕಾಣಿಸಿಕೊಳ್ಳುವ ಅತೀಯಾದ ಬೊಜ್ಜು, ಉಸಿರಾಟದ ತೊಂದರೆ, ಚರ್ಮದ ಕಾಯಿಲೆಗಳು, ಅಸಿಡಿಟಿ-ಅಲ್ಸರ್, ಲೈಂಗಿಕ ದುರ್ಬಲತೆ, ಕೀಲುಗಳ ಉರಿತ, ಇತ್ಯಾದಿ ಮನೋದೈಹಿಕ ರೋಗಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಹಾಗಂತ ಮೇಲೆ ತಿಳಿಸಿದ ಎಲ್ಲಾ ರೋಗಗಳು ಕೇವಲ ಮಾನಸಿಕ ಒತ್ತಡದಿಂದಲೆ ಉಂಟಾದುದು ಅಂತಲ್ಲ, ಹಲವಾರು ಬಾರಿ ಇದು ಅನುವಂಶಿಯಕವೂ ಆಗಿರಬಹುದು. ಹಾಗೂ ಕೆಲವೊಮ್ಮೆ ಇದು ನೈಜ ದೈಹಿಕ ಅಂಗಾಂಗಗಳ ಸವೆತದಿಂದಲೂ ಬರಬಹುದು. ಆದರೆ ವೈದ್ಯಕೀಯ ಸರ್ವೇಕ್ಷಣ [Survey] ಗಳ ಪ್ರಕಾರ ಇಂದು ಆಸ್ಪತ್ರೆಗಳಿಗೆ ಭೇಟಿ ಕೊಡುವ ಶೇ.40 ಜನರಲ್ಲಿ ಈ ರೋಗ ಗಳಿಗೆ ಅವರಲ್ಲಿರುವ ಪ್ರಕ್ಷುಬ್ಧ ಮನಸ್ಸು ಹಾಗೂ ಅವರ ಮನಸ್ಸನ್ನು ಕಾಡುವ ನಕರಾತ್ಮಕ ಭಾವೋದ್ವೇಗಗಳು ಹಾಗೂ ಅದುಮಿಟ್ಟ ಭಾವನಾತ್ಮಕ ಸಮಸ್ಯೆಗಳೇ ಕಾರಣ.

ಮನಸ್ಸಿನ ಮೇಲೆ ಅತೀಯಾದ ಒತ್ತಡ ಹಾಕಿದರೆ, ದಿನವೂ ನಕರಾತ್ಮಕ ಯೋಚನೆಗಳಿಂದ ಮನಸ್ಸನ್ನು ತುಂಬಿಸುತ್ತಿದ್ದರೆ, ಹಾಗೂ ಅತೀಯಾಗಿ ಕಾಡುವ ಭಾವನೆಗಳು ಮತ್ತು ವಿಷಯಗಳನ್ನು ತುಂಬುತ್ತಲೆ ಹೋದರೆ, ಮಿತಿ ಮೀರಿದ ಒತ್ತಡದಿಂದ ಬಳಲುವ ಮನಸ್ಸು ದೇಹದ ಒಳ ಅಂಗಾಂಗಗಳನ್ನು ಸವೆಸುತ್ತಾ ಮನೋದೈಹಿಕ ರೋಗದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಪರಿಹಾರ:

1. ರೋಗವು ತೀರಾ ಉಲ್ಬಣ ಸ್ಥಿತಿಯಲ್ಲಿದ್ದರೆ, ವೈದ್ಯರ ಸಲಹೆ ಮೇರೆಗೆ ಮಾತ್ರೆ ಹಾಗೂ ಔಷಧಿಗಳನ್ನು ಸೇವಿಸಬೇಕಾಗುತ್ತದೆ.

2. ನಿಮ್ಮ ಜೀವನ ಶೈಲಿಯೂ ತೀರಾ ಒತ್ತಡದಿಂದ ಹಾಗೂ ಉದ್ವೇಗಗಳಿಂದ ಕೂಡಿದ್ದರೆ ಒತ್ತಡ ನಿರ್ವಹಣೆಯ ಮಾರ್ಗಗಳನ್ನು ತಿಳಿದುಕೊಂಡು ಅಳವಡಿಸಿಕೊಳ್ಳಿ ಹಾಗೂ ದಿನವೂ ಯೋಗ, ಧ್ಯಾನ, ಪ್ರಾಣಯಾಮ ಮುಂತಾದ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಿ.

3. ದೀರ್ಘವಾಗಿ ಕಾಡುವ ವಿಷಯ ಹಾಗೂ ಭಾವನೆಗಳನ್ನು ಆತ್ಮೀಯರಲ್ಲಿ/ಸ್ನೇಹಿತರಲ್ಲಿ ಹಂಚಿಕೊಳ್ಳಿ. ಹಾಗೂ ಭಯ, ದುಃಖ, ಕೋಪ ಗಳಿದ್ದಾಗ ಮನಸ್ಸಿಗೆ ಸಂತೋಷ-ಮುದ ಕೊಡುವ ಹವ್ಯಾಸ ಚಟುವಟಿಕೆ ಹಮ್ಮಿಕೊಳ್ಳಿ.

4. ಯಾರಲ್ಲೂ ಹೇಳಿಕೊಳ್ಳಲಾರದ ಅತ್ಯಂತ ಸೂಕ್ಷ್ಮ ಹಾಗೂ ತೀರಾ ವೈಯಕ್ತಿಕ ವಿಷಯಗಳಿದ್ದರೆ, ಆಪ್ತ ಸಮಾಲೋಚಕರನ್ನು ಭೇಟಿ ಮಾಡಿ ಪರಿಹಾರ ಕಂಡುಕೊಳ್ಳಿ.

5. ಚಿಂತೆ ಮಾಡದ ವ್ಯಕ್ತಿ ಇಲ್ಲ. ಇದ್ದರೂ ಚಿಂತೆ ಅನುಗಾಲವೂ ಅತೀಯಾದ ಚಿಂತೆ ಮಾಡಿದರೆ ಮೈ-ಮನಸ್ಸುಗಳು ಕೆಡುತ್ತದೆ. ಚಿಂತೆ ಮಾಡುವಂತಹ ವ್ಯಕ್ತಿ/ವಿಷಯ/ಸಮಸ್ಯೆ ಇದ್ದಾಗ ಚಿಂತೆ ಮಾಡದೆ ಅವುಗಳನ್ನು ನಿಭಾಯಿಸುವುದರ ಬಗ್ಗೆ ಹೆಚ್ಚು ಗಮನಕೊಡಿ.



111 ಅಡಿ ಎತ್ತರದ ಬಸವ ಪುತ್ಥಳಿ

ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಆದ್ದರಿಂದ 111 ಅಡಿ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಗಿದೆ. ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ-ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು.

ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು- ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಗವಿಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ.

ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560 010. 9448137508, 9449588669

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ-8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಗಿರೀಶ್ ಕುಮಾರ್.ಎಸ್
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಸುಮುಖ ಪಬ್ಲಿಷರ್ಸ್ ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ	ವಿಶ್ವ ಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್)
	ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ,
10-03-2016

ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬೆಂಗಳೂರು -560010

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666







ಪೂಜ್ಯಶ್ರೀ ಮಹಾಜಗದ್ಗುರು

ಡಾ.ಮಾತೆ ಮಹಾದೇವಿಯವರ

71ನೇ ವರ್ಧಂತಿ ಮಹೋತ್ಸವ

13-3-2016, ಭಾನು(ದೇವ)ವಾರ ಬೆಳಗ್ಗೆ 10.30 ರಿಂದ

ಬೆಂಗಳೂರಿನ ಪುರಭವನದಲ್ಲಿ (ಜೆಸಿ ಮಾರುಕಟ್ಟೆ ಸಮೀಪ)

27-02-2016, ದೇವ(ಭಾನು)ವಾರ ಬೆಳಗ್ಗೆ 10.30 ಗಂಟೆಗೆ

ಚಿತ್ರದುರ್ಗ ತಾಲೂಕಿನ
ಸಾಸಲಹಟ್ಟಿ ಗ್ರಾಮದ ಅಕ್ಕಮಹಾದೇವಿ ಮಠದಲ್ಲಿ

ಪೂಜ್ಯ ಮಾತಾಜಿಯವರು 13-3-1946 ರಂದು ಶರಣ ಡಾ.ಎಸ್. ಆರ್. ಬಸಪ್ಪ ಮತ್ತು ಶರಣೆ. ಬಿ. ಗಂಗಮ್ಮನವರ ಮಗಳಾಗಿ ಜನಿಸಿದ್ದು 13-3-2016 ರಂದು 70 ವರ್ಷ ಪೂರೈಸಿ 71ಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಆದ್ದರಿಂದ ಅವರ 71ನೇ ವರ್ಧಂತಿಯನ್ನು ಅಂದು ಬೆಂಗಳೂರು ನಗರದ ಮಧ್ಯಭಾಗದಲ್ಲಿರುವ ನವೀಕೃತ ಸರ್. ಕೆ.ಪಿ. ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ಆಚರಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಪೂಜ್ಯ ಮಾತಾಜಿಯವರಿಗೆ ಶುಭ ಹಾರೈಸಬೇಕೆಂದು ವಿನಂತಿಸುತ್ತೇವೆ.

ಶರಣು ಶರಣಾರ್ಥಿಗಳೊಡನೆ
ಶರಣ. ಬಸವಲಿಂಗಪ್ಪ
ವ್ಯವಸ್ಥಾಪಕರು.

ಶರಣ. ಎಸ್. ಪುಟ್ಟರುದ್ರ
ಗೌರವಾಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ ಬೆಂಗಳೂರು
ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ,
ಬಸವಮಂಟಪ ಮೊ-9449528669

Registered with Registrar of News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post the Printed Magazine without Prepayment (WPP-17). Posted at Bengaluru PSO. Mysuru Road (Bg-560026) on 3rd, 10th, 20th of every month. Pages 32+4 (Cover Pages)